ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಡಿಸೆಂಬರ್ 12, 2024

ಸಂಪುಟ : 51 ಸಂಚಿಕೆ : 209 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


# ಸ್ವಾವಲಂಬನೆಯಿಂದ ದೇಶದ ಅಭಿವೃದ್ಧಿ

## ಸ್ವದೇಶಿ ಮೇಳ ಉದ್ಘಾಟಿಸಿದ ಪಂಚಮಸಾಲಿ ಜಗದ್ಗುರು ವಚನಾನಂದ ಸ್ವಾಮೀಜಿ

ದಾವಣಗೆರೆ, ಡಿ.11- ಸ್ವಾವಲಂಬನೆಯಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಇತ್ತೀಚಿನ ವರ್ಷಗಳಲ್ಲಿ ಭಾರತ ಸ್ವಾವಲಂಬಿಯಾಗುವತ್ತ ಹೆಜ್ಜೆ ಹಾಕುತ್ತಿದೆ ಎಂದು ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

ಸ್ವದೇಶಿ ಜಾಗರಣ ಮಂಚ್ ವತಿಯಿಂದ ನಗರದ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಲಾಗಿರುವ ಸ್ವದೇಶಿ ಮೇಳದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪೆಟ್ರೋಲ್, ಡೀಸೆಲ್ ಹೆಚ್ಚಾಗಿ ಬಳಸುತ್ತಿದ್ದ ನಮ್ಮ ದೇಶವು, ಇಂದು ಅದಕ್ಕೆ ಪರ್ಯಾಯವಾಗಿ ಎಥೆನಾಲ್ ಬಳಕೆ ಕಂಡುಕೊಳ್ಳುತ್ತಿದೆ. ಇದರಿಂದ ಕೋಟ್ಯಾಂತರ ಹಣ ಉಳಿತಾಯವಾಗುತ್ತಿದೆ. ದೇಶದ ಆರ್ಥಿಕತೆ ಸುಧಾರಿಸುತ್ತದೆ ಎಂದರು.

ಭಾರತೀಯ ಜನರು ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗುತ್ತಿದ್ದಾರೆ. ಆದರೆ ವಿದೇಶಿಯರು ಯೋಗ, ಧ್ಯಾನ ಸೇರಿದಂತೆ ಭಾರತೀಯ ಸಂಸ್ಕೃತಿ ಅನುಸರಿಸುವುದು ಹೆಚ್ಚಾಗುತ್ತಿದೆ. ಈ ಸಂದರ್ಭದಲ್ಲಿ ಯುವ ಜನತೆ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ವ್ಯಕ್ತಿಯ ಆರೋಗ್ಯವೇ ಬಹುದೊಡ್ಡ ಸಂಪತ್ತು. ಶಾರೀರಿಕ ಆರೋಗ್ಯ ದೇಶದ ಆರೋಗ್ಯವೂ ಹೌದು. ಮನುಷ್ಯ ಆರೋಗ್ಯವಾಗಿರಬೇಕಾದರೆ ದೇಶೀಯ ಉತ್ಪನ್ನಗಳನ್ನು ಬಳಸಬೇಕು ಎಂದು ಶ್ರೀಗಳು ಹೇಳಿದರು.

ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಮಾತನಾಡಿ, ಸ್ವದೇಶಿ ಹಾಗೂ ವಿದೇಶಿ ವಸ್ತುಗಳ ನಡುವೆ ಬೆಲೆಗಳ ಅಂತರ ಹೆಚ್ಚಾಗಿದೆ. ಸ್ಥಳೀಯ ವಸ್ತುಗಳಿಗೆ ಚೌಕಾಶಿ ಮಾಡುವ ಜನರು, ವಿದೇಶಿ ವಸ್ತುಗಳನ್ನು ಹೇಳಿದಷ್ಟು ಬೆಲೆ ನೀಡಿ ಕೊಳ್ಳುತ್ತಾರೆ. ಸ್ವದೇಶಿ ವಸ್ತುಗಳೂ ಕಡಿಮೆ ಬೆಲೆಗೆ ಸಿಗುವಂತಹ ವಾತಾವರಣ ನಿರ್ಮಾಣವಾಗಬೇಕು ಎಂದರು.

ಜವಳಿ ಉದ್ಯಮಿ ಬಿ.ಸಿ. ಉಮಾಪತಿ (4ನೇ ಪುಟಕ್ಕೆ)



### ಉಳಿತಾಯ ಸಂಸ್ಕೃತಿಯಿಂದ ಆರ್ಥಿಕ ಸುಧಾರಣೆ: ಕುಮಾರಸ್ವಾಮಿ

ದಾವಣಗೆರೆ, ಡಿ.11- ಸಾಲ ಮಾಡಿ ತುಪ್ಪ ತಿನ್ನುವ ಸಂಸ್ಕೃತಿ ಪಾಶ್ಚಾತ್ಯರದ್ದು, ಉಳಿತಾಯ ಮಾಡುವ ಸಂಸ್ಕೃತಿ ಭಾರತೀಯರದ್ದು ಎಂದು ಸ್ವದೇಶಿ ಚಿಂತಕ ಪ್ರೊ.ಬಿ.ಎಂ. ಕುಮಾರ ಸ್ವಾಮಿ ಹೇಳಿದರು.

ಭಾರತೀಯ ಉಳಿತಾಯ ಸಂಸ್ಕೃತಿಯಿಂದ ದೇಶ ಆರ್ಥಿಕವಾಗಿ ಬಲಾಢ್ಯವಾಗಿದೆ. ಆದರೆ ಸಾಲ ಮಾಡುವ ಸಂಸ್ಕೃತಿಯಿಂದ ವಿದೇಶಗಳು ಸಾಲದ ಸುಳಿಗೆ ಸಿಲುಕುತ್ತಿವೆ ಎಂದರು.

ಅಮೇರಿಕಾದಲ್ಲಿ ಕುಟುಂಬದ ಹೊಣೆಯನ್ನು ಸರ್ಕಾರವೇ ಹೊರುತ್ತದೆ. ಇದರಿಂದ ಸಾಮಾಜಿಕ ವೆಚ್ಚಕ್ಕಾಗಿ ಅದು 30 ಬಿಲಿಯನ್ ಡಾಲರ್ ವ್ಯಯ ಮಾಡುತ್ತದೆ. ಆದರೆ ಭಾರತದಲ್ಲಿ ನಾವೇ ಕುಟುಂಬದ ಜವಾಬ್ದಾರಿ ಹೊರುತ್ತವೆ. ಉಳಿತಾಯ ಮನೋಭಾವ ಭಾರತೀಯರಿಗೆ ರಕ್ತಗತವಾಗಿಯೇ ಬಂದಿದೆ ಎಂದರು.

ಎಲ್ಲಿಯವರೆಗೆ ಕುಟುಂಬಗಳು ಗಟ್ಟಿಯಾಗಿರುತ್ತವೋ ಅಲ್ಲಿಯವರೆಗೂ ದೇಶದ ಆರ್ಥಿಕತೆ ಉತ್ತಮವಾಗಿರುತ್ತದೆ. ಸಾಲ ಮಾಡುವ, ಕ್ರೆಡಿಟ್ ಕಾರ್ಡ್ ಬಳಸುವ ಪರಂಗಿ ರೋಗದಿಂದ ಯುವ ಜನ ಹೊರ ಬರಬೇಕು ಎಂದರು.

# ರೈಲ್ವೆ ಮಸೂದೆಗೆ ಲೋಕಸಭೆ ಅಸ್ತು

> **ಮಸೂದೆಯ ಕಾರಣದಿಂದ ರೈಲ್ವೆ ಖಾಸಗಿಕರಣವಾಗಲಿದೆ ಎಂದು ಪ್ರತಿಪಕ್ಷಗಳು ಆರೋಪಿಸುತ್ತಿವೆ. ಇಂತಹ ಅಪವ್ಯಾಖ್ಯಾನವೂ ಹುಸಿ ಆಗಲಿದೆ**
> **- ರೈಲ್ವೆ ಸಚಿವ ಅಶ್ವಿನಿ ವೈಷ್ಣವ್**

ನವದೆಹಲಿ,ಡಿ.11 - ರೈಲ್ವೆ (ತಿದ್ದುಪಡಿ) ಮಸೂದೆ 2024ಕ್ಕೆ ಲೋಕಸಭೆಯಲ್ಲಿ ಧ್ವನಿ ಮತದ ಮೂಲಕ ಅಂಗೀಕಾರ ನೀಡಲಾಗಿದೆ. ಈ ಹಿಂದೆ ಗದ್ದಲದ ಕಾರಣದಿಂದಾಗಿ ಮಸೂದೆಗೆ ಅಂಗೀಕಾರ ಪಡೆಯಲು ಸಾಧ್ಯವಾಗಿರಲಿಲ್ಲ.

ಬುಧವಾರ ಚರ್ಚೆಯ ನಂತರ ಮಸೂದೆಗೆ ಲೋಕಸಭೆ ಒಪ್ಪಿಗೆ ನೀಡಿತು. ತಿದ್ದುಪಡಿ ಮಸೂದೆ ಅಂಗೀಕಾರಗೊಂಡಿರುವ ಕಾರಣದಿಂದಾಗಿ ರೈಲ್ವೆ ಖಾಸಗೀಕರಣಗೊಳ್ಳುವುದಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಿದೆ.

ಮಸೂದೆ ಕುರಿತು ಮಾತನಾಡಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಸಂವಿಧಾನ ವಿಫಲವಾಗಿದೆ ಎಂದು ಅಪವ್ಯಾಖ್ಯಾನ ಮಾಡಲಾಗುತ್ತಿದೆ. ಅದೇ ರೀತಿ ಮಸೂದೆಯ ಕಾರಣದಿಂದ ರೈಲ್ವೆ ಖಾಸಗಿಕರಣವಾಗಲಿದೆ ಎಂದು ಪ್ರತಿಪಕ್ಷಗಳು ಆರೋಪಿಸುತ್ತಿವೆ. ಇಂತಹ ಅಪವ್ಯಾಖ್ಯಾನವೂ ಹುಸಿ ಆಗಲಿದೆ ಎಂದು ಹೇಳಿದರು.

ರೈಲ್ವೆ ಮಂಡಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡುವ ಈ ಮಸೂದೆಯನ್ನು ಲೋಕಸಭಾ ಅಧಿವೇಶನದ ವೇಳೆ ಮಂಡಿಸಲಾಗಿತ್ತು. ರೈಲ್ವೆ ಪ್ರಯಾಣ ದರ ಸೇರಿದಂತೆ ಹಲವು ವಿಷಯಗಳನ್ನು ಸ್ಪರ್ಧಾತ್ಮಕವಾಗಿ ನಿರ್ಧರಿಸಲು ಸ್ವತಂತ್ರ ನಿಯಂತ್ರಕ ಒಂದನ್ನು ರೂಪಿಸಲು ಈ ಮಸೂದೆ ಉದ್ದೇಶಿಸಿದೆ.

ಮಸೂದೆ ಕುರಿತು ಮಾತನಾಡಿದ ಸಚಿವ ವೈಷ್ಣವ್, ದೇಶದಲ್ಲಿ 140 ಕೋಟಿ ಜನ ಇದ್ದಾರೆ ಆರ್ಥಿಕತೆ ವೇಗವಾಗಿ ಬೆಳೆಯುತ್ತಿದೆ. ರೈಲ್ವೆ ಸಾಮರ್ಥ್ಯ ವಿಸ್ತರಣೆಗೆ ಹೆಚ್ಚು ಅವಕಾಶಗಳಿವೆ. ಆದರೆ ಕಳೆದ (4ನೇ ಪುಟಕ್ಕೆ)

# ಲಿಂಗ ತಟಸ್ಥ ಕಾಯ್ದೆಗೆ ಪರಿಣಿತರ ಸಲಹೆ

ನವದೆಹಲಿ, ಡಿ. 11 - ಗೃಹ ಹಿಂಸಾಚಾರ ಹಾಗೂ ವರದಕ್ಷಿಣೆ ತಡೆ ಕಾಯ್ದೆಗಳ ವ್ಯಾಪಕ ದುರ್ಬಳಕೆ ಆಗುತ್ತಿದೆ ಎಂದು ಕಾನೂನು ಪರಿಣಿತರು ಕಳವಳ ವ್ಯಕ್ತಪಡಿಸಿದ್ದಾರೆ. ಈ ದುರ್ಬಳಕೆ ತಡೆಯಬೇಕಿದೆ ಹಾಗೂ ಲಿಂಗ ತಟಸ್ಥವಾದ ಹೊಸ ಕಾಯ್ದೆಗಳನ್ನು ಜಾರಿಗೆ ತರಬೇಕಿದೆ ಎಂದವರು ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನ 34 ವರ್ಷದ ಟೆಕಿ ಅತುಲ್ ಸುಭಾಷ್ ಅವರು ವೈವಾಹಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ತಮಗೆ ಎದುರಾದ ಪೀಡನೆಗಳ ಕುರಿತು 24 ಪುಟಗಳ ಮರಣ ಪತ್ರ ಬರೆದು ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ ಪರಿಣಿತರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಹಿರಿಯ ವಕೀಲ ವಿಕಾಸ್ ಪಹ್ವ, ಕಾಯ್ದೆಗಳ ದುರ್ಬಳಕೆ ವಿಷಯ ಗಂಭೀರವಾಗಿದ್ದು ಪರಿಹಾರ ಕಂಡುಕೊಳ್ಳಬೇಕಿದೆ ಎಂದಿದ್ದಾರೆ.

ಈ ಕಾಯ್ದೆಗಳನ್ನು ಕೆಲವು ವ್ಯಕ್ತಿಗಳು ಹಲವು ವರ್ಷಗಳಿಂದ ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಕಂಡು ಬಂದಿದೆ. ಇದು ಗಂಭೀರ ವಿಷಯವಾಗಿದೆ ಹಾಗೂ ಇದಕ್ಕೆ ಪರಿಹಾರ ಕಂಡುಕೊಳ್ಳಬೇಕಿದೆ. ಈ ಕಾಯ್ದೆಗಳಲ್ಲಿನ ಸೆಕ್ಷನ್ಗಳನ್ನು ಜಾಮೀನು ಸಹಿತ ಮಾಡಬೇಕಿದೆ ಎಂದು ತಿಳಿಸಿದ್ದಾರೆ. ಕೆಲ ಪ್ರಕರಣಗಳಲ್ಲಿ ಮಾವಂದಿರ ವಿರುದ್ಧವು ಲೈಂಗಿಕ ದೌರ್ಜನ್ಯದ ಹುಸಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಇಂತಹ ಪ್ರಕರಣಗಳನ್ನು ನಾವು ಪ್ರತಿದಿನ ನೋಡುತ್ತಿದ್ದೇವೆ.

ನ್ಯಾಯಾಲಯಗಳು ಈ ರೀತಿಯ ಹುಸಿ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಪೊಲೀಸರಲ್ಲಿಯೂ ಈ ಬಗ್ಗೆ ಸಂವೇದನೆ ಮೂಡಿಸಬೇಕಿದೆ. ಇಂತಹ ಹುಸಿ ಪ್ರಕರಣಗಳನ್ನು ದಾಖಲಿಸಲು ಅವಕಾಶ ಇರಬಾರದು ಎಂದು ಪಹ್ವ (2ನೇ ಪುಟಕ್ಕೆ)

# ಕೃಷ್ಣ ಪಂಚಭೂತಗಳಲ್ಲಿ ಲೀನ



- ಹುಟ್ಟೂರಿನಲ್ಲಿ ಕೃಷ್ಣ ಅಂತಿಮ ಸಂಸ್ಕಾರ
- ಮೊಮ್ಮಗ ಅಮರ್ತ್ಯ ಹೆಗ್ಡೆ ಅವರಿಂದ ಅಗ್ನಿ ಸ್ಪರ್ಶ
- ಒಕ್ಕಲಿಗ ಸಮುದಾಯದ ವಿಧಾನದಂತೆ ಅಂತ್ಯಕ್ರಿಯೆ
- 1,500 ಕೆ.ಜಿ. ಗಂಧದ ತುಂಡುಗಳ ಬಳಕೆ

ಬೆಂಗಳೂರು, ಡಿ. 11- ಮಂಗಳವಾರ ನಿಧನರಾದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರ ಪಂಚಭೂತಗಳಲ್ಲಿ ಲೀನವಾಯಿತು.

ಬುಧವಾರ ಸಂಜೆ ಕೃಷ್ಣ ಅವರ ಹುಟ್ಟೂರಾದ ಸೋಮನಹಳ್ಳಿಯಲ್ಲಿ ಸಕಲ ಸರ್ಕಾರಿ ಗೌರವ ಹಾಗೂ ಸಹಸ್ರಾರು ಜನರ ಅಶ್ರುತರ್ಪಣದ ನಡುವೆ ಪಾರ್ಥಿವ ಶರೀರದ ಅಂತ್ಯಕ್ರಿಯೆ ನೆರವೇರಿತು.

ಬೆಂಗಳೂರು-ಮೈಸೂರು ಹೆದ್ದಾರಿ ಪಕ್ಕದಲ್ಲಿರುವ ಅವರ ಜಮೀನಿನಲ್ಲಿ ಮೊಮ್ಮಗ ಅಮರ್ತ್ಯ ಹೆಗ್ಡೆ, ತಾತನ ಪಾರ್ಥಿವ ಶರೀರಕ್ಕೆ ವಿಧಿವಿಧಾನ ಹಾಗೂ ಶಾಸ್ತ್ರೋಕ್ತವಾಗಿ ಅಗ್ನಿ ಸ್ಪರ್ಶ ಮಾಡಿದರು.

ವೇದ ಬ್ರಹ್ಮ ಭಾನುಪ್ರಕಾಶ್ ಶರ್ಮ ನೇತೃತ್ವದಲ್ಲಿ ವಿಧಿವಿಧಾನ ಕಾರ್ಯಗಳು ನಡೆದವು, 1,500 ಕೆ.ಜಿ. ಗಂಧದ ತುಂಡುಗಳನ್ನು ಅಂತ್ಯಕ್ರಿಯೆಗೆ ಬಳಸಲಾಯಿತು.

ಇದಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಎಚ್.ಡಿ. ಕುಮಾರಸ್ವಾಮಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಪ್ರತಿಪಕ್ಷ ನಾಯಕ ಆರ್.ಅಶೋಕ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಸೇರಿದಂತೆ ಅನೇಕ ಗಣ್ಯರು ಅಂತಿಮ ನಮನ ಸಲ್ಲಿಸಿದರು.

ಮಂಗಳವಾರ ಮುಂಜಾನೆ ಸದಾಶಿವನಗರದ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದ ಕೃಷ್ಣ ಅವರ ಪಾರ್ಥಿವ ಶರೀರವನ್ನು ಬುಧವಾರ ಬೆಳಿಗ್ಗೆ ವಿಶೇಷ ವಾಹನದಲ್ಲಿ ಹುಟ್ಟೂರಿಗೆ ಕೊಂಡೊಯ್ಯಲಾಯಿತು.

ದಾರಿಯುದ್ದಕ್ಕೂ ಸಹಸ್ರಾರು ಅಭಿಮಾನಿಗಳು ಅಗಲಿದ ನಾಯಕನಿಗೆ ಗೌರವ (4ನೇ ಪುಟಕ್ಕೆ)

## ಕೃಷ್ಣಗೆ ಮರಣೋತ್ತರ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿ

ಬೆಂಗಳೂರು, ಡಿ. 11- ರಾಜಧಾನಿ ಬೆಂಗಳೂರಿಗೆ ಸಿಲಿಕಾನ್ ವ್ಯಾಲಿ, ಐಟಿ ಹಬ್ ಸ್ಥಾನ ಒದಗಿಸಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಕೀರ್ತಿ ಪತಾಕೆ ಹಾರಿಸಿದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಮರಣೋತ್ತರ 'ಕರ್ನಾಟಕ ರತ್ನ' ಪ್ರಶಸ್ತಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಒತ್ತಾಯಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಎಸ್.ಎಂ.ಕೃಷ್ಣ ಅವರ ಕೊಡುಗೆ ಗುರುತಿಸಿ, ಕರ್ನಾಟಕದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಕರ್ನಾಟಕ ರತ್ನ' (ಮರಣೋತ್ತರ) ನೀಡುವುದು ಸೂಕ್ತ ಎಂಬುದು ತಮ್ಮ ಅಭಿಪ್ರಾಯ ಎಂದಿದ್ದಾರೆ.

ಮುಖ್ಯಮಂತ್ರಿ ಅವರು, ಈ ಸಲಹೆ ಪರಿಗಣಿಸಿ ಕೃಷ್ಣ (3ನೇ ಪುಟಕ್ಕೆ)

## ವೈವಾಹಿಕ ಅತ್ಯಾಚಾರ ಅಪರಾಧಗೊಳಿಸುವ ಪ್ರಸ್ತಾಪ ಇಲ್ಲ : ಕೇಂದ್ರ

ನವದೆಹಲಿ, ನ.11- 18 ವರ್ಷ ಮೀರಿದ ಹಾಗೂ ವೈವಾಹಿಕ ಸಂಬಂಧದಲ್ಲಿರುವ ಪತಿಯು ಪತ್ನಿ ಮೇಲೆ ಅತ್ಯಾಚಾರ ನಡೆಸಿರುವುದಾಗಿ ಪ್ರಕರಣ ದಾಖಲಿಸಲು ಅವಕಾಶ ನೀಡುವ ಯಾವುದೇ ಪ್ರಸ್ತಾವನೆ ತನ್ನ ಎದುರು ಇಲ್ಲ ಎಂದು ಕೇಂದ್ರ (3ನೇ ಪುಟಕ್ಕೆ)

# ಎಸ್.ಎಂ. ಕೃಷ್ಣರ ಋಣ ತೀರಿಸದ ಐಟಿ-ಬಿಟಿ

ಬೆಂಗಳೂರು, ಡಿ. 11- ರಾಜಧಾನಿ ಬೆಂಗಳೂರನ್ನು ಐಟಿ-ಬಿಟಿ ಹಬ್ ಆಗಿ ಗುರುತಿಸಿಕೊಳ್ಳಲು ಕಾರಣೀಭೂತರಾದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನಿಧನಕ್ಕೆ ಮಾಹಿತಿ ತಂತ್ರಜ್ಞಾನ ವಲಯ ಕನಿಷ್ಠ ಗೌರವವಾಗಿ ಶ್ರದ್ಧಾಂಜಲಿಯನ್ನೂ ಸಲ್ಲಿಸದೇ ಉಪಕಾರ ಸ್ಮರಣೆಯೇ ಇಲ್ಲದಂತೆ ವರ್ತಿಸಿದೆ.

ಕೃಷ್ಣ ಅವರ ನಿಧನಕ್ಕೆ ರಾಜ್ಯ ಸರ್ಕಾರ ಗೌರವಾರ್ಥವಾಗಿ 3 ದಿನಗಳ ಕಾಲ ಶೋಕಾಚರಣೆ ಹಾಗೂ 1ದಿನ ರಜೆ ಘೋಷಣೆ ಮಾಡಿದೆ.

ಶಿಕ್ಷಣ ಸಂಸ್ಥೆಗಳು, ಬ್ಯಾಂಕಿಂಗ್ ಸೇರಿದಂತೆ ಬಹುತೇಕ ವಲಯ ರಜೆ ಘೋಷಿಸುವ ಮೂಲಕ ಗೌರವ ಸಲ್ಲಿಸಿವೆ.

ಕೃಷ್ಣ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ದಿನದಂದು 0.5ರಷ್ಟಿದ್ದ ಐಟಿ-ಬಿಟಿ ವಲಯ, ಅವರು ಅಧಿಕಾರದಿಂದ ಕೆಳಗಿಳಿಯುವ ವೇಳೆಗೆ ಬೆಂಗಳೂರು ಸೇರಿದಂತೆ ರಾಜ್ಯ ವಿವಿಧ ಭಾಗಗಳಲ್ಲಿ ಸಾವಿರಾರು ಮಾಹಿತಿ ತಂತ್ರಜ್ಞಾನ ಆಧಾರಿತ ಸಂಸ್ಥೆಗಳು ತಲೆ ಎತ್ತಿದ್ದವು.

ಈ ವಲಯ ಬೆಳೆಯಲೆಂದೇ ಕೃಷ್ಣ ಸರ್ಕಾರ ಅವರಿಗೆ ಅಗತ್ಯ ಭೂಮಿ ಮತ್ತು ಮೂಲಸೌಕರ್ಯ ಕಲ್ಪಿಸಿ ಉತ್ತೇಜಿಸಿತು, ಐಟಿ ದಿಗ್ಗಜರ ಬೇಡಿಕೆಗಳಿಗೆ ತಕ್ಕಂತೆ ಸೌಲಭ್ಯಗಳನ್ನೆಲ್ಲಾ ಸರ್ಕಾರ ಒದಗಿಸಿತು.

ಇದರಿಂದಾಗಿ ಸಾವಿರಾರು ಮಾಹಿತಿ ತಂತ್ರಜ್ಞಾನ ಆಧಾರಿತ ಸಂಸ್ಥೆಗಳು ಸ್ಥಾಪನೆಗೊಂಡು 20 ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಿ ಕರ್ನಾಟಕ ಹಾಗೂ ಕೇಂದ್ರ ಸರ್ಕಾರಕ್ಕೆ ಲಕ್ಷಾಂತರೂ ರೂ. ತೆರಿಗೆ ರೂಪದಲ್ಲಿ ಹರಿದುಬಂದಿತು.

ಭಾರತೀಯ ಸಂಸ್ಥೆಗಳಲ್ಲದೆ, ವಿಶ್ವದ ಅನೇಕ ಕಂಪನಿಗಳು ಕರ್ನಾಟಕದಲ್ಲಿ ಶಾಖೆಗಳನ್ನು ಆರಂಭಿಸಿದವು.

ಅಂದು ಮುಖ್ಯಮಂತ್ರಿ ಕಚೇರಿಯನ್ನು ದಿನನಿತ್ಯ ಎಡತಾಕುತ್ತಿದ್ದ ಐಟಿ ಕಂಪನಿ ಸಂಸ್ಥಾಪಕರು ಇಂದು ಕೃಷ್ಣ ಅವರ ನಿಧನದ ಗೌರವಾರ್ಥ ಒಂದು ಸಣ್ಣ ಶ್ರದ್ಧಾಂಜಲಿ ಸಭೆಯನ್ನೂ ಆಯೋಜಿಸಲಿಲ್ಲ, ಸಾಮಾಜಿಕ ಜಾಲತಾಣಗಳಲ್ಲೂ ಕೃಷ್ಣ ಅವರ ಸ್ಮರಣೆ ಮಾಡಿಲ್ಲ.

ವೀರಪ್ಪ ಮೊಯಿಲಿ ಅವರು, ಶಿಕ್ಷಣ ಸಚಿವರಾಗಿ ಉನ್ನತ ಶಿಕ್ಷಣಕ್ಕೆ ಒತ್ತುಕೊಟ್ಟು ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕ್ಷೇತ್ರಗಳಿಗೆ ಬಡವರು ಮತ್ತು ಮಧ್ಯಮ ವರ್ಗಗಳವರ ಪ್ರವೇಶಾವಕಾಶಕ್ಕೆ ಸಿಇಟಿ ಸ್ಥಾಪಿಸಿದರು.

ಎಸ್.ಬಂಗಾರಪ್ಪ ಆಡಳಿತದಲ್ಲಿ ಈ ನಿರ್ಣಯ ಕೈಗೊಂಡಿದ್ದರಿಂದ ಕರ್ನಾಟಕದಿಂದ ಲಕ್ಷಾಂತರ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪದವಿ ಪಡೆದುಕೊಂಡರು.

ಇದರಿಂದ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಬೇಕಾದಂತಹ ಸಂಪನ್ಮೂಲ ವ್ಯಕ್ತಿಗಳು ದೊರೆಯುವರೆಂಬ ಉದ್ದೇಶದಿಂದ ಐಟಿ-ಬಿಟಿ ವಲಯ ಕರ್ನಾಟಕದತ್ತ ಮುಖ ಮಾಡಿತು.

ದೇವೇಗೌಡ ಹಾಗೂ ಜೆ.ಎಚ್.ಪಟೇಲ್ ಆಡಳಿತ ಕಾಲದಲ್ಲಿ ಈ ವಲಯದ ಅಭಿವೃದ್ಧಿಗೆ ಅಡಿಪಾಯ ಹಾಕಲಾಯಿತು. (5ನೇ ಪುಟಕ್ಕೆ)

## ಹರಿಹರೇಶ್ವರ ಅರ್ಬನ್ ಬ್ಯಾಂಕ್ ಅಧ್ಯಕ್ಷರಾಗಿ ಮಲ್ಲಿಕಾರ್ಜುನ್

ಹರಿಹರ, ಡಿ.11- ನಗರದ ಹರಿಹರೇಶ್ವರ ಅರ್ಬನ್ ಕೋ-ಆಪ್ ಬ್ಯಾಂಕ್ ಅಧ್ಯಕ್ಷರಾಗಿ ಜಿ.ಕೆ. ಮಲ್ಲಿಕಾರ್ಜುನ್ ಹಾಗೂ ಉಪಾಧ್ಯಕ್ಷರಾಗಿ ನಾಗೇಂದ್ರಸಾ ಕಾಟ್ವೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ರವೀಂದ್ರ ಕೆ. ಮತ್ತು ಉಪಾಧ್ಯಕ್ಷ ಹಾಲೇಶ್ ಬಾವಿಕಟ್ಟಿ ಅವರುಗಳು ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಜಿ.ಕೆ. ಮಲ್ಲಿಕಾರ್ಜುನ್ ಮತ್ತು ಉಪಾಧ್ಯಕ್ಷರಾಗಿ ನಾಗೇಂದ್ರಸಾ ಕಾಟ್ವೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿಯಾದ ಸಹಕಾರಿ ಅಭಿವೃದ್ಧಿ ಇಲಾಖೆಯ ಅಧಿಕಾರಿ ಸುನಿತಾ ಘೋಷಿಸಿದರು.

ಈ ಸಂದರ್ಭದಲ್ಲಿ ನಿರ್ದೇಶಕರಾದ ಬಿ.ಕೆ. (2ನೇ ಪುಟಕ್ಕೆ)

## ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಇಲ್ಲ : ಅರವಿಂದ ಕೇಜ್ರಿವಾಲ್



ನವದೆಹಲಿ, ನ.11- ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಆಮ್ ಆದ್ಮಿ ಪಾರ್ಟಿ ನಾಯಕ ಕೇಜ್ರಿವಾಲ್ ತಿಳಿಸಿದ್ದಾರೆ. ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಾರ್ಟಿಗಳು ಚುನಾವಣೆಯಲ್ಲಿ ಮೈತ್ರಿ ಮಾಡಿಕೊಳ್ಳಲಿವೆ ಎಂಬ ಮಾತುಗಳು ಈ ಹಿಂದೆ ಕೇಳಿಬಂದಿದ್ದವು.

ಫೆಬ್ರವರಿ ತಿಂಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಪಕ್ಷ ಬಲವಾಗಿದೆ. ನಾವು ಸ್ವತಂತ್ರವಾಗಿ ಸ್ಪರ್ಧಿಸುತ್ತೇವೆ ಎಂದು ದೆಹಲಿ ಕಾಂಗ್ರೆಸ್ ಅಧ್ಯಕ್ಷ ದೇವೇಂದ್ರ ಯಾದವ್ ತಿಳಿಸಿದ್ದಾರೆ

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಳ್ಳುವ ಯಾವುದೇ ಸಾಧ್ಯತೆ ಇಲ್ಲ ಎಂದು ಕೇಜ್ರಿವಾಲ್ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ

# ಕಾರ್ತಿಕ ಮಾಸದಲ್ಲಿ ದೀಪ, ವಸ್ತ್ರ ದಾನದಿಂದ ಪುಣ್ಯ ಲಭಿಸಲಿದೆ : ಕೃಷ್ಣಾಚಾರ್ಯ ಮಣ್ಣೂರು

ಭರಮಸಾಗರ, ಡಿ.11- ಕಾರ್ತಿಕ ಮಾಸದಲ್ಲಿ ದೀಪ ಮತ್ತು ಹೊಸ ವಸ್ತ್ರ ದಾನ ಮಾಡಿದರೆ ಒಳಿತಾಗಲಿದೆ ಎಂದು ದಾವಣಗೆರೆ ಪಿ.ಜೆ. ಬಡಾವಣೆಯ ರಾಯರ ಮಠದ ಕೃಷ್ಣಾಚಾರ್ಯ ಮಣ್ಣೂರು ತಿಳಿಸಿದರು.



ಇಲ್ಲಿನ ಪವಮಾನ ಪ್ರತಿಷ್ಠಾನದ ವತಿಯಿಂದ ಪಟ್ಟಣದಲ್ಲಿ ಈಚೆಗೆ ಆಯೋಜಿಸಿದ್ದ 'ಷಷ್ಟ್ಯಬ್ದಿ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಾಜದ ವಿವಿಧ ವಿಭಾಗಗಳಲ್ಲಿ ಸಾಧನೆ ಗೈದ ವ್ಯಕ್ತಿಯನ್ನು ಜಾತ್ಯತೀತವಾಗಿ ಗುರುತಿಸಿ ಅವರನ್ನು ಸನ್ಮಾನಿಸುವ ಪ್ರತಿಷ್ಠಾನದ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಬೆಂಗಳೂರಿನ ಜ್ಯೋತಿಷ್ಯ ವಾಸ್ತು ಸಲಹೆಗಾರರಾದ ಮಾಲತಿ ವಿ. ವಿಠ್ಠಲ್ ಮಾತನಾಡಿ, ಪ್ರತಿಷ್ಠಾನವು ಎಲ್ಲರನ್ನೂ ಬೆಳೆಸುವ ಮುಖ್ಯ ಉದ್ದೇಶ ಹೊಂದಿದೆ ಎಂದು ತಿಳಿಸಿದರು.

ಇದೇ ವೇಳೆ 60 ವರ್ಷ ತುಂಬಿದ ಹಿರಿಯ ದಂಪತಿಗಳಾದ ಎಂ.ಜಿ ಭಾರತಿ ಮಲ್ಲಾರಿ ರಾವ್, ವೀಣಾ ನಂಜುಂಡಯ್ಯ, ವಿಶಾಲ ಲೀಲಾಕೃಷ್ಣ, ನಾಗರತ್ನಮ್ಮ ವಿಜಯಕುಮಾರ್, ಹೆಚ್.ವಿ. ಕುಸುಮ ದತ್ತಾತ್ರೇಯ ಮತ್ತು ಲತಾಶ್ರೀ ಸಿ. ಶೇಷಗಿರಿರಾವ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ದಾವಣಗೆರೆ ವಿಶ್ವಮಾಧ್ವ ಮಹಾ ಪರಿಷತ್ ಘಟಕದ ಹೆಚ್. ನಾಗರಾಜ ರಾವ್, ಕವಯತ್ರಿ ಜೆ.ಎನ್. ಕೋಮಲ ವಸಂತಕುಮಾರ್ ಕವನ ವಾಚನ (4ನೇ ಪುಟಕ್ಕೆ)

## ನೀರು ಬಳಕೆ: ರಾಜ್ಯ ಕ್ರಿಕೆಟ್ ಒಕ್ಕೂಟಕ್ಕೆ ನೋಟಿಸ್

ನವದೆಹಲಿ,ಡಿ.11 - ಬೆಂಗ ಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೈದಾನಕ್ಕೆ ಸಿಹಿ ನೀರು ಬಳಸುತ್ತಿ ರುವುದಕ್ಕೆ ಆಕ್ಷೇಪಿಸಿ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು ಕರ್ನಾಟಕ ರಾಜ್ಯ ಕ್ರಿಕೆಟ್ ಒಕ್ಕೂಟಕ್ಕೆ ನೋಟಿಸ್ ಕಳಿಸಿದೆ. ಒಂದು ಐಪಿಎಲ್ ಪಂದ್ಯದ ವೇಳೆ ಕ್ರೀಡಾಂಗಣದಲ್ಲಿ 75,000 ಲೀಟರ್ ನೀರು ಬಳಕೆಯಾಗುತ್ತದೆ. ಇದೇ ವೇಳೆ ರಾಜ್ಯದಲ್ಲಿ 500 ದಶಲಕ್ಷ ಲೀಟರ್ ನೀರಿನ ಕೊರತೆ ಇದೆ. ಹೀಗಿದ್ದರೂ ಸಿಹಿ ನೀರನ್ನು ಕ್ರೀಡಾಂಗಣಕ್ಕೆ ಬಳಸುತ್ತಿರುವುದು ಏಕೆ ಎಂದು ನ್ಯಾಯಾಧೀಕರಣ ಪ್ರಶ್ನಿಸಿದೆ.

ಕಳೆದ ಎಪ್ರಿಲ್ ತಿಂಗಳಲ್ಲಿ ನ್ಯಾಯಾಧೀಕರಣ ಈ ಬಗ್ಗೆ ಸ್ಪಷ್ಟನೆ ಕೇಳಿತ್ತು. ಕ್ರೀಡಾಂಗಣಕ್ಕೆ ಅಂತರ್ಜಲ ಬಳಸುತ್ತಿರುವುದಾಗಿ ಕ್ರಿಕೆಟ್ ಒಕ್ಕೂಟ ತಿಳಿಸಿತ್ತು. ಆದರೆ ಅಂತರ್ಜಲ ಸಹ ಸಿಹಿ ನೀರಿನ ಮೂಲವಾಗಿದೆ ಎಂದು ನ್ಯಾಯಾಧೀಕರಣ ಹೇಳಿದೆ.

ಕ್ರೀಡಾಂಗಣಕ್ಕೆ ಮರುಬಳಕೆ ನೀರು ಏಕೆ ಬಳಸುತ್ತಿಲ್ಲ ಎಂದು ಪ್ರಶ್ನಿಸಿರುವ ನ್ಯಾಯಾಧೀಕರಣ, ಈ ಬಗ್ಗೆ ನಾಲ್ಕು ವಾರಗಳಲ್ಲಿ ಉತ್ತರ ದಾಖಲಿಸುವಂತೆ ತಿಳಿಸಿದೆ.

ಕ್ರೀಡಾಂಗಣದಲ್ಲಿ ಪ್ರತಿದಿನ 200 ಕಿಲೋ ಮೀಟರ್ ತ್ಯಾಜ್ಯ ನೀರು ಸಂಸ್ಕರಿಸುವ ಘಟಕ ಅಳವಡಿಸಲಾಗಿದೆ. ಈ (2ನೇ ಪುಟಕ್ಕೆ)

## ಜಮ್ಮು-ಕಾಶ್ಮೀರದಲ್ಲಿ ಜಾತಿ ಸಮೀಕ್ಷೆ ಅಗತ್ಯವಿದೆ: ತಾರಿಕ್

ಶ್ರೀನಗರ, ಡಿ. 11- ಸಮಾಜದ ವಿವಿಧ ಹಿಂದುಳಿದ ವರ್ಗಗಳಿಗೆ ಅನುಪಾತದಲ್ಲಿ ಮೀಸಲಾತಿ ನೀಡಲು ಜಾತಿ ಸಮೀಕ್ಷೆಯ ಅಗತ್ಯವಿದೆ ಎಂದು (4ನೇ ಪುಟಕ್ಕೆ)


**ಜಮೀನು ಮಾರಾಟಕ್ಕಿದೆ**

ದಾವಣಗೆರೆಯಿಂದ 16 ಕಿ.ಮೀ. ದೂರದಲ್ಲಿರುವ ಪೋತಲಕಟ್ಟೆಯಲ್ಲಿ 10 ಎಕರೆ ಜಮೀನಿನಲ್ಲಿ 5 ಎಕರೆ ಅಡಿಕೆ, 2 ಬೋರ್, ಟಿಸಿ ಇರುವ ಜಮೀನು ಮಾರಾಟಕ್ಕಿದೆ.

**76762 79944**
**91645 05653**




# ಜಗಳೂರಿನಲ್ಲಿ ಕಮ್ಯುನಿಸ್ಟ್ ಪ್ರತಿಭಟನೆ




ಜಗಳೂರು, 11 - ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ಇಂದು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಹಾಗೂ ಕೋಮುವಾದ, ಹಿಂಸಾಚಾರ ಖಂಡಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ತಹಶೀಲ್ದಾರ್ ಅವರ ಮುಖಾಂತರ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು.

ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಕಾರ್ಯದರ್ಶಿ ಮಹಮ್ಮದ್ ಭಾಷ ಮಾತನಾಡಿ,'ಅದಾನಿ ಮೇಲಿನ ಲಂಚ ಪ್ರಕರಣದ ಕುರಿತು ಜೆಪಿಸಿ ಮೂಲಕ ಸಮಗ್ರ ತನಿಖೆ ನಡೆಸಬೇಕು. ಮಣಿಪುರದ ಮೈತೇಯಿ ಮತ್ತು ಕುಕ್ಕಿ ಸಮುದಾಯಗಳ ನಡುವೆ ನಡೆಯುವ ಜನಾಂಗೀಯ ಸಂಘರ್ಷ ನಿಲ್ಲಿಸಿ, ಶಾಂತಿ

ಸುವ್ಯವಸ್ಥೆ ಕಾಪಾಡಬೇಕು. ಧರ್ಮಗಳ ಮಧ್ಯೆ ಕೋಮುಭಾವನೆ ಕೆರಳಿಸುವ ಕೃತ್ಯಗಳು ನಡೆಯದಂತೆ ಸಾಮರಸ್ಯತೆ ಒದಗಿಸಬೇಕು ಎಂದು ಒತ್ತಾಯಿಸಿದರು.

ಎಐಟಿಯುಸಿ ತಾಲ್ಲೂಕು ಅಧ್ಯಕ್ಷ ತಿಪ್ಪೇಸ್ವಾಮಿ ಮಾತನಾಡಿ,'ದೇಶದಲ್ಲಿ ಸಂವಿಧಾನ ಬಹುತ್ವದ ಆಶಯದ ವಿರುದ್ದವಾಗಿ ಏಕತ್ವದ ಪ್ರತಿಪಾದನೆ ಮುಂದುವರೆಸಿರುವ ಮೋದಿ ಆಡಳಿತ ಸರ್ಕಾರ ಒಕ್ಕೂಟ ವ್ಯವಸ್ಥೆಗೆ ಮಾರಕವಾಗಲಿರುವ ಒಂದು ದೇಶ ಒಂದು ಚುನಾವಣೆ ಎಂಬ ವಿಷಯವನ್ನು ಮುನ್ನೆಲೆಗೆ ತರುತ್ತಿರುವುದು ಜನ ವಿರೋಧಿಯಾಗಿದೆ. ಸಂವಿಧಾನಿಕ ಆಶಯಗಳನ್ನು ಸಾಕಾರಗೊಳಿಸಿ ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪಕ್ಷದ ಪದಾಧಿಕಾರಿಗಳಾದ ಅಜ್ಜಪ್ಪ, ಕರಿಯಪ್ಪ, ಚನ್ನಮ್ಮ ಸೇರಿದಂತೆ ಇತರರು ಭಾಗವಹಿಸಿದ್ದರು.

# ನಾಳೆ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದಿಂದ ಪ್ರತಿಭಟನೆ

ದಾವಣಗೆರೆ, ಡಿ. 11- ರಾಜ್ಯದಲ್ಲಿ ಹಿಂದುಳಿದ ವರ್ಗಗಳ ನಿಗಮಗಳಿಗೆ ಹಣ ನೀಡಿ, ಇಲ್ಲವೇ ಮುಚ್ಚಿ ಬಿಡಿ ಎಂಬ ಘೋಷವಾಕ್ಯದೊಂದಿಗೆ ನಾಡಿದ್ದು ದಿನಾಂಕ 13 ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಿಂದ ಉಪ ವಿಭಾಗಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಸಂಕಷ್ಟ ಬಂದಾಗ ಮಾತ್ರ ಅಹಿಂದ ಜಪ ಮಾಡುತ್ತಾರೆ. ಆದರೆ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಅಗತ್ಯ ಅನುದಾನ ನೀಡದೇ ವ್ಯವಸ್ಥಿತವಾಗಿ ತುಳಿಯುವ ಕೆಲಸ ಮಾಡುತ್ತಿದ್ದಾರೆಂದು ದೂರಿದರು. ಹಿಂದುಳಿದ ವರ್ಗಗಳ ಸಮಗ್ರ ಅಭಿವೃದ್ಧಿಗೆ ನಿಗಮ ಪ್ರಾರಂಭಿಸಿ ಒಂದು ಸಾವಿರ ಕೋಟಿ ಅನುದಾನ ನೀಡಲಾಗಿತ್ತು. ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಜೆಟ್‌ನಲ್ಲಿ 1500 ಕೋಟಿ ಘೋಷಣೆ ಮಾಡಿ ಕೇವಲ 57.4 ಕೋಟಿ ಮಾತ್ರ ವೆಚ್ಚ ಮಾಡಿ ಹಿಂದುಳಿದ ವರ್ಗಗಳಿಗೆ ವಂಚಿಸುತ್ತಿದೆ ಎಂದು ಆರೋಪಿಸಿದರು.

ಹಿಂದುಳಿದ ವರ್ಗಗಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಅರಿವು ಎಂಬ ಸಾಲ ಯೋಜನೆಯಡಿ ಲಕ್ಷಾಂತರ ವಿದ್ಯಾರ್ಥಿಗಳು ಸಾಲ-ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿದರೂ ಈವರೆಗೆ ಕೇವಲ 900 ವಿದ್ಯಾರ್ಥಿಗಳಿಗೆ ಮಾತ್ರ ಸಾಲ-ಸೌಲಭ್ಯ ಒದಗಿಸಿದೆ. ಬಾಕಿ ಇರುವ ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯ ಕಲ್ಪಿಸಬೇಕೆಂದರು. ಹೆಬ್ಬಾಳು ಮಹೇಂದ್ರ, ಕೋಳೇನಹಳ್ಳಿ ಬಿ.ಎಂ. ಸತೀಶ್, ಎನ್.ಎಂ. ಮಂಜುನಾಥ, ರವಿಕುಮಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

# ಪರಿಸರ ರಕ್ಷಣೆ ಎಲ್ಲರ ಜವಾಬ್ದಾರಿ : ಕುಬೇರಪ್ಪ



ರಾಣೇಬೆನ್ನೂರು,ಡಿ.11- ಮುಂದಿನ ಪೀಳಿಗೆಗೆ ಶುದ್ಧ ಗಾಳಿ, ನೀರು, ಆಹಾರ, ಉತ್ತಮ ಪರಿಸರವನ್ನು ಕೊಡುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಬಿ.ಎ.ಜೆ.ಎಸ್.ಎಸ್ ಸ್ವತಂತ್ರ ಪದವಿ-ಪೂರ್ವ ಮಹಿಳಾ ಕಾಲೇಜು ಆಡಳಿತಾಧಿಕಾರಿ ಡಾ.ಆರ್. ಎಮ್ ಕುಬೇರಪ್ಪ ತಿಳಿಸಿದರು.

ತಾಲ್ಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯ ಹಾಗೂ ಬಿ.ಎ.ಜೆ.ಎಸ್.ಎಸ್. ಸ್ವತಂತ್ರ ಪದವಿ-ಪೂರ್ವ ಮಹಿಳಾ ಕಾಲೇಜು ವತಿಯಿಂದ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಹವಾಮಾನ ಬದಲಾವಣೆ ಮತ್ತು ಮಾನವ ಆರೋಗ್ಯ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

ಜಿಲ್ಲಾ ಮಲೇರಿಯಾ ರೋಗ ನಿಯಂತ್ರಣಾಧಿಕಾರಿ ಡಾ. ಸರಿತಾ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ, ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಅಲ್ಲದೇ ವಿದ್ಯಾರ್ಥಿನಿಯರು ಮಾನವ ಸರಪಳಿ ಕಾರ್ಯಕ್ರಮ ನಡೆಸಿ, ಪರಿಸರ ಕಾಳಜಿ ಕುರಿತಂತೆ ಅರಿವು ಮೂಡಿಸಿದರು.

ಪ್ರಾಚಾರ್ಯ ಹೆಚ್.ಬಿ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ನಾಗರಾಜ ಕುಡಪಲಿ, ಕೆ.ಎಂ.ಕೋರ್ಲಹಳ್ಳಿ, ಮಲ್ಲಿಕಾರ್ಜುನ ಪಿ.ಎಂ., ದೇವೇಂದ್ರಪ್ಪ ಪಿ.ಎಸ್, ಪ್ರಶಾಂತ ಕೆ, ಶ್ರೀಮತಿ ಲತಾ ಧೂಳೆಹೊಳೆ, ಬೀರೇಶ ಚೌಡಣ್ಣನವರ, ಅಶೋಕ ಬಣಕಾರ, ಲಚ್ಚನಾಯ್ಕ ಎಲ್., ಕು.ನೇತ್ರಾ ಆರ್. ಉಪಸ್ಥಿತರಿದ್ದರು.

ಶ್ರೀಮತಿ ಶಾರದಾ ವಾಲಿ ನಿರೂಪಣೆ ಮಾಡಿದರು. ಎ. ಶಂಕರನಾಯ್ಕ ಸ್ವಾಗತಿಸಿದರು. ವಂದನಾರ್ಪಣೆಯನ್ನು ಎಂ.ಎನ್. ರಾಜು ನೆರವೇರಿಸಿದರು.

## ಚೌಡಯ್ಯದಾನಾಪುರದಲ್ಲಿ ಕಾರ್ತಿಕ

ರಾಣೇಬೆನ್ನೂರು ತಾಲ್ಲೂಕಿನ ಚೌಡಯ್ಯದಾನಾಪುರದಲ್ಲಿ ಡಿ.12ರ ರಾತ್ರಿ 8ಕ್ಕೆ ಶ್ರೀ ವೀರಭದ್ರೇಶ್ವರ ದೇವರ ಕಾರ್ತಿಕೋತ್ಸವವು ಚೌಡಯ್ಯದಾನಾಪುರ ಸಂಸ್ಥಾನ ಮಠದ ಚಿತ್ರಶೇಖರ ಒಡೆಯರ ಶಿವಾಚಾರ್ಯ ಶ್ರೀಗಳ ಸಾನ್ನಿಧ್ಯದಲ್ಲಿ ಜರುಗಲಿದೆ ಎಂದು ದೇವಸ್ಥಾನದ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

# ವಿದ್ಯಾರ್ಥಿಗಳು ಪತ್ರಿಕೆ ಓದುವ ಹವ್ಯಾಸ ರೂಢಿಸಿಕೊಳ್ಳಿ : ಡಿಸಿ



ಹರಿಹರ, ಡಿ.11- ವಿದ್ಯಾರ್ಥಿಗಳು ಪ್ರತಿ ನಿತ್ಯ ದಿನ ಪತ್ರಿಕೆ ಓದುವ ಹವ್ಯಾಸ ರೂಢಿಸಿಕೊಂಡರೆ ಜ್ಞಾನಾರ್ಜನೆ ವೃದ್ಧಿಸಿಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಜಿ.ಎಂ ಗಂಗಾಧರಸ್ವಾಮಿ ಅವರು ಶಾಲಾ ಮಕ್ಕಳಿಗೆ ಕಿವಿಮಾತು ಹೇಳಿದರು.

ನಗರದ ವಿವಿಧ ಶಾಲೆಗಳಿಗೆ ಭೇಟಿ ನೀಡಿ, ಅಲ್ಲಿನ ಶಾಲಾ ಮಕ್ಕಳೊಂದಿಗೆ ಬೆರೆತು ಅವರಿಗೆ ಬೋಧನೆ ಮಾಡುವ ವೇಳೆ ಅವರು ಹೇಳಿದರು. ವಿದ್ಯಾರ್ಥಿ ಜೀವನದಲ್ಲಿ ಆತ್ಮವಿಶ್ವಾಸ ಬಹಳ ಮುಖ್ಯ ಎಂದ ಅವರು, ಶಿಕ್ಷಕರು ಹೇಳಿಕೊಡುವ ಪಾಠವನ್ನು ಸರಿಯಾಗಿ ಆಲಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ಸಮಯ ಪರಿಪಾಲನೆಗೆ ಹೆಚ್ಚು ಒತ್ತು ನೀಡುವ ಜತೆಗೆ ಅವಶ್ಯಕತೆಗೆ ತಕ್ಕಷ್ಟೇ ಮೊಬೈಲ್ ಬಳಸಬೇಕೆಂದು ತಿಳಿಸಿದರು.

ಈ ಬಾರಿ ಹರಿಹರ ತಾಲ್ಲೂಕಿನಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ಹೊಸ ದಾಖಲೆ ಸೃಷ್ಟಿಸಬೇಕು. ಈ ನಿಟ್ಟಿನಲ್ಲಿ ಮಕ್ಕಳನ್ನು ತಯಾರಿಗೊಳಿಸಬೇಕು ಎಂದು ಶಿಕ್ಷಕರಿಗೆ ಸೂಚನೆ ನೀಡಿದರು.

ವಿವಿಧ ಶಾಲೆಗಳಲ್ಲಿನ ಬಿಸಿಯೂಟದ ಕೊಠಡಿ ಪರಿಶೀಲಿಸಿ, ಅಕ್ಷರ ದಾಸೋಹದ ದಾಸ್ತಾನು, ಬಿಸಿಯೂಟದ ವ್ಯವಸ್ಥೆ ಹಾಗೂ ಅಲ್ಲಿನ ಸ್ವಚ್ಛತೆಯ ಬಗ್ಗೆ ಮಾಹಿತಿ ಪಡೆದರು.

# ಹೊನ್ನಾಳಿ : ಲಾಟಿ ಚಾರ್ಜ್ ಖಂಡಿಸಿ ಇಂದು ಪ್ರತಿಭಟನೆ




ಹೊನ್ನಾಳಿ, ಡಿ.11- 2ಎ ಮೀಸಲಾತಿಗೆ ಆಗ್ರಹಿಸಿ ಬೆಳಗಾವಿಯಲ್ಲಿ ಮಂಗಳವಾರ ಹೋರಾಟ ನಡೆಸುತ್ತಿದ್ದ ಪಂಚಮಸಾಲಿ ಸಮಾಜದ ಮೇಲೆ ಪೊಲೀಸರು ಲಾಟಿ ಚಾರ್ಜ್ ಮಾಡುವ ಮೂಲಕ ಹೋರಾಟ ಹತ್ತಿಕ್ಕಲು ಪ್ರಯತ್ನಿಸುತ್ತಿರುವುದನ್ನು ತೀವ್ರವಾಗಿ ಖಂಡಿಸುವುದಾಗಿ ಕರ್ನಾಟಕ ರಾಜ್ಯ ವೀರ ಪಂಚಮಸಾಲಿ ಸಮಾಜದ ರಾಜ್ಯ ಪ್ರಧಾನ ಕಾರ್ಯದರ್ಶಿ ಪರಮೇಶ ಪಟ್ಟಣ ಶೆಟ್ಟಿ ಹೇಳದರು.

ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಬುಧವಾರ ಕರೆದಿದ್ದ ಬೆಳಗಾವಿ ಘಟನೆಯ ಖಂಡನಾ ನಿರ್ಣಯದ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.ಈ ಘಟನೆಗೆ ಕಾರಣರಾದ ಅಧಿಕಾರಿಗಳನ್ನ ಅಮಾನತ್ತು ಮಾಡುವ ಮೂಲಕ ಹಲ್ಲೆಗೊಳಗಾದ ಬಂಧುಗಳಿಗೆ ಹಾಗು ಪಂಚಮಸಾಲಿ ಸಮಾಜಕ್ಕೆ ನ್ಯಾಯ ಒದಗಿಸಬೇಕಿದೆ ಎಂದರು. ಘಟನೆಯನ್ನ ಖಂಡಿಸಿ ಡಿ.12 ರ ಗುರುವಾರ ಬೆಳಗ್ಗೆ 11 ಗಂಟೆಗೆ ವೀರಭದ್ರೇಶ್ವರ ದೇವಸ್ಥಾನದಿಂದ ಪಂಚಮಸಾಲಿ ಸಮಾಜದ ತಾಲ್ಲೂಕು ಘಟಕ, ಮಹಿಳಾ ಘಟಕ, ಯುವ ಹಾಗೂ ನಗರ ಘಟಕಗಳಿಂದ ಶಾಂತಿಯುತ ಮೆರವಣಿಗೆ ನಡೆಸಲಾಗುವುದು ಎಂದರು.

ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಬೆನಕನಹಳ್ಳಿ ವೀರಪ್ಪ, ಯುವ ಘ. ಅಧ್ಯಕ್ಷ ಸಾಯಿ ಹಾಲೇಶ್, ನಗರ ಘ.ಅಧ್ಯಕ್ಷ ಹೋಟೆಲ್ ಗಿರೀಶ್, ಉಪಾಧ್ಯಕ್ಷ ಪ್ರಶಾಂತ , ರೇಣುಕಪ್ಪ ಉಪಸ್ಥಿತರಿದ್ದರು.


## ಹನ್ನೆರಡನೇ ವರ್ಷದ ಪುಣ್ಯಸ್ಮರಣೆ



**ದಿ. ಹಾಸಬಾವಿ ಜೆ. ವಿಶ್ವನಾಥ್ (ಈಶಣ್ಣ)**

*ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳಾದವು. ಸದಾ ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ,*

**ಪತ್ನಿ : ಶ್ರೀಮತಿ ಸಾವಿತ್ರಮ್ಮ ಮತ್ತು ಮಕ್ಕಳು, ಸಹೋದರರು ಹಾಗೂ ಹಾಸಬಾವಿ ವಂಶಸ್ಥರು, ದಾವಣಗೆರೆ.**


# ಹರಿಹರ: ನಾಳೆ ಚಲೋ ಬೆಳಗಾವಿ ಅಂಬೇಡ್ಕರ್ ಜಾಥಾ

ದಾವಣಗೆರೆ, ಡಿ. 11- ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ, ಕಾಂತರಾಜ್ ವರದಿ ಸಾರ್ವಜನಿಕಗೊಳಿಸಿ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ, ಸಾಮಾಜಿಕ ನ್ಯಾಯಕ್ಕಾಗಿ ಆಗ್ರಹಿಸಿ ಎಸ್.ಡಿ.ಪಿ.ಐ. ಉಡುಪಿಯಿಂದ ಡಿ. 10 ರಂದು ಪ್ರಾರಂಭಿಸಿರುವ 'ಚಲೋ ಬೆಳಗಾವಿ, ಅಂಬೇಡ್ಕರ್ ಜಾಥಾ- 2' ನಾಡಿದ್ದು ದಿನಾಂಕ 13 ರಂದು ಹರಿಹರ ತಲುಪಲಿದೆ ಎಂದು ಸಂಘಟನೆಯ ಖಜಾಂಚಿ ಎಂ.ಆರ್. ತಾಹೀರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರೊ. ಬಿ. ಕೃಷ್ಣಪ್ಪ ಅವರ ಸಮಾಧಿಗೆ ಮಾಲಾರ್ಪಣೆ ಮಾಡಿದ ನಂತರ ಜಾಥಾವು ಪಕ್ಕೀರಸ್ವಾಮಿ ಮಠದವರೆಗೆ ಸಾಗಿ, ನಂತರ ಜಾಥಾವು ಕಾಲ್ನಡಿಗೆಯೊಂದಿಗೆ ಶಿವಮೊಗ್ಗ ವೃತ್ತ, ಹರಪನಹಳ್ಳಿ ವೃತ್ತದ ಮೂಲಕ ಹರಿಹರ ತಾಲ್ಲೂಕು ಕಚೇರಿ ತಲುಪಲಿದೆ. ಅಲ್ಲಿ ಸಭಾ ಕಾರ್ಯಕ್ರಮ ನಡೆಸಿದ ನಂತರ ರಾಣೇಬೆನ್ನೂರು ಮಾರ್ಗದ ಕಡೆ ಸಾಗಲಿದೆ ಎಂದು ಹೇಳಿದರು.

ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ-ಕರ್ನಾಟಕ ವತಿಯಿಂದ ಸಾಮಾಜಿಕ ನ್ಯಾಯಕ್ಕಾಗಿ ಒತ್ತಾಯಿಸಿ ಚಲೋ ಬೆಳಗಾವಿ ಅಂಬೇಡ್ಕರ್ ಜಾಥಾ- 2 ಕಾರ್ಯಕ್ರಮ ನಡೆಯಲಿದೆ. ನಮ್ಮದು ಅಹಿಂದ ಸರ್ಕಾರ, ಸಾಮಾಜಿಕ ನ್ಯಾಯದ ಪರ ಇದ್ದೇವೆ ಎಂದು ಹೇಳಿಕೊಳ್ಳುವ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ದಲಿತ, ಹಿಂದುಳಿದ, ಅಲ್ಪಸಂಖ್ಯಾತರ ಅನೇಕ ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುತ್ತಿಲ್ಲ ಎಂದು ದೂರಿದರು.

ಕೇವಲ ನೆಪ ಮಾತ್ರದ ಮೌಖಿಕ ಹೇಳಿಕೆಗಳನ್ನು ನೀಡಿ ಕಣ್ಣೊರೆಸುವ ತಂತ್ರವನ್ನು ಮಾಡುತ್ತಿದೆ. ಪರಿಶಿಷ್ಟ ಜಾತಿಗಳ ಒಳ ಮೀಸಲಾತಿಯನ್ನು ಕೂಡಲೇ ಜಾರಿಗೊಳಿಸಬೇಕು. ಮುಸ್ಲಿಮರ 2ಬಿ ಮೀಸಲಾತಿಯನ್ನು ಪುನರ್ ಪರಿಶೀಲಿಸಿ ಶೇ. 8 ಕ್ಕೆ ಏರಿಸಬೇಕು. ಕಾಂತರಾಜ್ ಆಯೋಗದ ವರದಿಯನ್ನು ಸಾರ್ವಜನಿಕ ಗೊಳಿಸಿ, ಜಾರಿಗೊಳಿಸಬೇಕು. ವಕ್ಫ್ ಆಸ್ತಿಗಳ ರಕ್ಷಣೆ, ಒಕ್ಕೂಟ ಬಿಜೆಪಿ ಸರ್ಕಾರ ಸಂವಿಧಾನ ವಿರೋಧಿಯಾಗಿ ಜಾರಿಗೆ ತರಲು ಹೊರಟಿರುವ ವಕ್ಫ್ ತಿದ್ದುಪಡಿ ಮಸೂದೆಯನ್ನು ಜಾರಿಗೊಳಿಸಬಾರದು ಎನ್ನುವ ನಿರ್ಣಯವನ್ನು ಸದನದಲ್ಲಿ ಕೈಗೊಳ್ಳಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿರುವ ಎಸ್‌ಸಿಪಿ, ಟಿಎಸ್‌ಪಿ ಹಣವನ್ನು ಬೇರೆ ಯಾವುದೇ ಯೋಜನೆಗಳಿಗೆ ಬಳಸಬಾರದು. 25-26 ನೇ ಸಾಲಿನ ಬಜೆಟ್‌ನಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ 10 ಸಾವಿರ ಕೋಟಿ ಮೀಸಲಿಡಬೇಕೆಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘಟನೆಯ ಪ್ರಮುಖರಾದ ಯಾಹ್ಯ, ರಿಜ್ವಿ ರಿಯಾಜ್ ಅಹ್ಮದ್, ಸಮೀವುಲ್ಲಾ ಮುಲ್ಲಾ, ಮೊಹಮ್ಮದ್ ಅಜರುದ್ದೀನ್ ಉಪಸ್ಥಿತರಿದ್ದರು.

# ಅದಾನಿ ಮೇಲಿನ ಲಂಚ ಪ್ರಕರಣ : ತನಿಖೆಗೆ ಒತ್ತಾಯ ಜಿಲ್ಲಾ ಕಮ್ಯುನಿಸ್ಟ್ ಪಕ್ಷದಿಂದ ನಗರದಲ್ಲಿ ಪ್ರತಿಭಟನೆ



ದಾವಣಗೆರೆ, ಡಿ. 10- ಅದಾನಿ ಮೇಲಿನ ಲಂಚ ಪ್ರಕರಣದ ಕುರಿತು, ಜೆಪಿಸಿ ಮೂಲಕ ತನಿಖೆ ನಡೆಸಲು ಒತ್ತಾಯಿಸಿ ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಆಗ್ರಹಿಸಿ, ಕೋಮು ಭಾವನೆ ಕೆರಳಿಸಿ ಹಿಂಸಾಚಾರಕ್ಕೆ ಪ್ರಚೋದಿಸುತ್ತಿರುವುದನ್ನು ತಡೆಗಟ್ಟಲು ಒತ್ತಾಯಿಸಿ, ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ ಪರಿಹರಿಸುವಲ್ಲಿ ವಿಫಲವಾಗಿರುವ ಕೇಂದ್ರ ಸರ್ಕಾರದ ಜನ ವಿರೋಧಿ ಆಡಳಿತವನ್ನು ಖಂಡಿಸಿ ಮಾತನಾಡಿದ ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು, ವಿಶ್ವಮಾನವ ಹಕ್ಕುಗಳ ದಿನವಾದ ಡಿಸೆಂಬರ್ 10 ರಂದು ಪ್ರತಿಭಟನೆ ನಡೆಸಿ ಸಿಪಿಐ ದಾವಣಗೆರೆ ಜಿಲ್ಲಾ ಮಂಡಳಿ ವತಿಯಿಂದ ದಾವಣಗೆರೆ ಉಪ ವಿಭಾಗಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಇಲ್ಲಿನ ಅಶೋಕ ರಸ್ತೆಯ ಪಂಪಾಪತಿ ಭವನದಿಂದ ಪ್ರತಿಭಟನಾ ಮೆರವಣಿಗೆ ಮೂಲಕ ಘೋಷಣೆಗಳನ್ನು ಕೂಗುತ್ತಾ ಸಾಗಿದ ಸಿಪಿಐ ಕಾರ್ಯಕರ್ತರು ಗಾಂಧಿ ಸರ್ಕಲ್, ಹಳೆ ಬಸ್ ನಿಲ್ದಾಣದ ಮೂಲಕ ದಾವಣಗೆರೆ ಉಪ ವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಅಲ್ಲಿ ಬಹಿರಂಗ ಸಭೆ ನಡೆಸಿ ಮನವಿ ಸಲ್ಲಿಸಲಾಯಿತು.

ಸಿಪಿಐ ಜಿಲ್ಲಾ ಸಹಕಾರ್ಯದರ್ಶಿ ಕಾಂ ಹೆಚ್ ಜಿ ಉಮೇಶ್, ಜಿಲ್ಲಾ ಮಂಡಳಿ ಸದಸ್ಯ ಕಾಂ ಪಿ. ಷಣ್ಮುಖಸ್ವಾಮಿ,ಕಾಂ ಐರಣಿ ಚಂದ್ರು ಮಾತನಾಡಿದರು.

ಪ್ರತಿಭಟನಾ ಮೆರವಣಿಗೆಯಲ್ಲಿ ಎರಗುಂಟೆ ಸುರೇಶ್, ಎಚ್.ಎಸ್. ಚಂದ್ರು, ನಿಟುವಳ್ಳಿ ಬಸವರಾಜ್, ಸಿ.ರಮೇಶ್, ಬಿ.ಕಲ್ಪನಳ್ಳಿ ವಸಂತ ಕುಮಾರ್, ಕೆರನಹಳ್ಳಿ ರಾಜು, ರಂಗನಾಥ್, ಚಿನ್ನಪ್ಪ, ವಿ. ಲಕ್ಷ್ಮಣ, ಸಿದ್ದಲಿಂಗೇಶ್, ರುದ್ರೇಶ್ ಲೋಕಿಕೆರೆ, ತಿಪ್ಪೇಸ್ವಾಮಿ, ಉಮೇಶ್ ಸೇರಿದಂತೆ, ಇತರರು ಭಾಗವಹಿಸಿದ್ದರು.

## ಲಿಂಗ ತಟಸ್ಥ ಕಾಯ್ದೆಗೆ ಪರಿಣಿತರ ಸಲಹೆ

**1ನೇ ಪುಟದಿಂದ** ಹೇಳಿದ್ದಾರೆ. ಈ ಬಗ್ಗೆ ಮಾತನಾಡಿರುವ ವಕೀಲೆ ಸಂವೇದನ ವರ್ಮ, ಮಹಿಳೆಯರ ಹಕ್ಕುಗಳ ರಕ್ಷಣೆ ಹಾಗೂ ಹಿತಕ್ಕಾಗಿ ಮಹಿಳಾ ಸ್ನೇಹಿ ಕಾಯ್ದೆಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಕೌಟುಂಬಿಕ ಬಿಕ್ಕಟ್ಟಿನ ಕಾರಣದಿಂದಾಗಿ ಮಹಿಳೆಯರು ಪೀಡನೆಗೆ ಒಳಗಾಗುವುದನ್ನು ತಪ್ಪಿಸಲು ಈ ಕಾಯ್ದೆಗಳನ್ನು ರೂಪಿಸಲಾಗಿದೆ. ಆದರೆ ಕೆಲ ಮಹಿಳೆಯರು ಇದೇ ಕಾಯ್ದೆಗಳನ್ನು ಗಂಡ ಹಾಗೂ ಕುಟುಂಬದ ಸದಸ್ಯರ ವಿರುದ್ಧ ದುರ್ಬಳಕೆ ಮಾಡಿಕೊಳ್ಳುತ್ತಿರುವುದನ್ನು ತಳ್ಳಿ ಹಾಕಲಾಗದು ಎಂದು ಹೇಳಿದ್ದಾರೆ. ಮಹಿಳಾ ರಕ್ಷಣಾ ಕಾಯ್ದೆಗಳಲ್ಲಿ ಯಾವುದೇ ಸಮಸ್ಯೆ ಇಲ್ಲ. ಆದರೆ ಅವುಗಳ ದುರ್ಬಳಕೆ ಸಮಸ್ಯೆಯಾಗಿದೆ. ನಮ್ಮ ಕಾನೂನು ಹಾಗೂ ಆಡಳಿತದಲ್ಲಿ ಇಂತಹ ದುರ್ಬಳಕೆ ತಡೆಯಲು ವ್ಯವಸ್ಥೆ ರೂಪಿಸಬೇಕಿದೆ ಎಂದವರು ಹೇಳಿದ್ದಾರೆ.

ವಿಚಾರಣೆ ಇಲ್ಲವೇ ತನಿಖೆ ಆರಂಭಕ್ಕೂ ಮುಂಚೆ ಆರೋಪಗಳ ಸತ್ಯಾಸತ್ಯತೆ ಪರಿಶೀಲಿಸಬೇಕಿದೆ ಎಂದವರು ತಿಳಿಸಿದ್ದಾರೆ.

# ಆಮ್ ಆದ್ಮಿ ಸದಸ್ಯತ್ವಕ್ಕೆ ಚಾಲನೆ



**ಹರಿಹರ**

ಹರಿಹರ, ಡಿ. 11- ನಗರದಲ್ಲಿ ಆಮ್ ಆದ್ಮಿ ಪಾರ್ಟಿ ವತಿಯಿಂದ ಸದಸ್ಯರನ್ನು ಗುರುತಿಸಲು ಆಪ್ ಪರಿವಾರ್ ಬಿಡುಗಡೆ ಮತ್ತು ಸದಸ್ಯತ್ವ ನೋಂದಣಿಗೆ ನೀಡಲಾಗುವುದು ಎಂದು ಆಮ್ ಆದ್ಮಿ ಪಾರ್ಟಿ ತಾಲ್ಲೂಕು ಅಧ್ಯಕ್ಷ ಜಿ.ಹೆಚ್. ಬಸವರಾಜ್ ಹಲಸಬಾಳ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಚುನಾವಣಾ ಆಯೋಗವು ರಾಜ್ಯದಲ್ಲಿ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆ ನಡೆಸುವುದಕ್ಕೆ ತಯಾರಿ ಮಾಡಿಕೊಳ್ಳುವ ಬಗ್ಗೆ ತಿಳಿದುಬಂದಿದ್ದು, ಇದರಿಂದಾಗಿ ತಾಲ್ಲೂಕಿನಲ್ಲಿ ಆಮ್ ಆದ್ಮಿ ಪಕ್ಷವನ್ನು ಸದೃಢವಾಗಿ ಕಟ್ಟುವುದರ ಜೊತೆಗೆ ಪಕ್ಷವನ್ನು ಮತ್ತಷ್ಟು ಬಲಿಷ್ಠವಾಗಿ ಬೆಳೆಸುವ ದೃಷ್ಠಿಯಿಂದ ಸದಸ್ಯತ್ವವನ್ನು ಮಾಡಲಿಕ್ಕೆ ಪಕ್ಷ ಮುಂದಾಗಿದೆ. ಸರ್ವ ಸದಸ್ಯರನ್ನು ಗುರುತಿಸಲು ಆಫ್ ಪರಿವಾರ್ ಬಿಡುಗಡೆ ಮತ್ತು ಸದಸ್ಯತ್ವ ಚಾಲನೆಗೆ ಮುಂದಾಗಿದೆ ಎಂದು ಹೇಳಿದರು.

ಇತ್ತೀಚಿಗೆ ಆಮ್ ಆದ್ಮಿ ಪಾರ್ಟಿ ಜಿಲ್ಲಾ ಕಚೇರಿಯಲ್ಲಿ ಹರಿಹರ ತಾಲ್ಲೂಕು ಘಟಕದ ಪದಾಧಿಕಾರಿಗಳ ಆಯ್ಕೆ ಪಟ್ಟಿಯನ್ನು ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು, ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಪೃಥ್ವಿರೆಡ್ಡಿ ಹಾಗೂ ರಾಜ್ಯ ಕಾರ್ಯದರ್ಶಿ ಬಸವರಾಜ್ ಮುದಿಗೌಡ್ರು, ಜಿಲ್ಲಾಧ್ಯಕ್ಷ ಕೆ.ಎಸ್. ಶಿವಕುಮಾರಪ್ಪ, ಅವರು ಹಾಗೂ ಇತರೆ ಪ್ರಮುಖ ಮುಖಂಡರ ಸಮಕ್ಷಮದಲ್ಲಿ ಆಯ್ಕೆ ಮಾಡಲಾಗಿದೆ.

ತಾಲ್ಲೂಕು ಅಧ್ಯಕ್ಷರಾಗಿ ಜಿ.ಹೆಚ್. ಬಸವರಾಜ್, ಪ್ರಧಾನ ಕಾರ್ಯದರ್ಶಿಯಾಗಿ ಮಹಮ್ಮದ್ ಯೂಸೂಫ್, ಕಾರ್ಯದರ್ಶಿ ಎಸ್.ಪಿ. ರೋಹಿತ್, ಸಹ ಕಾರ್ಯದರ್ಶಿ ಸೈಯದ್ ರಹೀಮ್, ಸಂಘಟನಾ ಕಾರ್ಯದರ್ಶಿ ನಾಗೇನಹಳ್ಳಿ ವೀರಭದ್ರಪ್ಪ, ಎಸ್ಸಿ, ಎಸ್ಟಿ ಘಟಕದ ಅಧ್ಯಕ್ಷ ಚಂದ್ರಪ್ಪ ದೇವರಬೆಳಕೆರೆ, ಯುವ ಘಟಕದ ಅಧ್ಯಕ್ಷ ಜಿಯಾವುಲ್ಲಾ, ಫುಟ್‌ಪಾತ್ ವ್ಯಾಪಾರಿಗಳ ಸಂಘದ ಅಧ್ಯಕ್ಷ ಅಲ್ತಾಫ್, ಆಟೋ ಚಾಲಕರ ಸಂಘದ ಅಧ್ಯಕ್ಷರಾಗಿ ಸಾಗರ್ ಬೊಂಗಾಳೆ, ನಗರ ಘಟಕದ ಅಧಕ್ಷರಾಗಿ ಬಿ. ಮಲ್ಲೇಶ್, ಮಹಿಳಾ ಘಟಕದ ಅಧ್ಯಕ್ಷೆಯಾಗಿ ರೇಕಾ ಬಿ.ಆಡೂರು, ಪ್ರಧಾನ ಕಾರ್ಯದರ್ಶಿ ಜೀಶಾನ್ ಮಲ್ಲಿಕ್, ಎಸ್ಸಿ, ಎಸ್ಟಿ ಕಾರ್ಯದರ್ಶಿ ಎ.ಕೆ. ಮಂಜಣ್ಣ ವಾಸನ, ಸಂಘಟನಾ ಕಾರ್ಯದರ್ಶಿ ಜಿಯಾಬಾಷಾ, ಕಾರ್ಯದರ್ಶಿ ಮಹಮ್ಮದ್ ಇರ್ಫಾನ್, ಸಂಘಟನಾ ಕಾರ್ಯದರ್ಶಿ ಅಲ್ಪಸಂಖ್ಯಾತ ಘಟಕದ ಮಹಮ್ಮದ್ ಬಾಷಾ, ಕಾರ್ಯದರ್ಶಿ ಮಹಮ್ಮದ್ ಮುಸ್ತಾಫಾ, ಪ್ರಧಾನ ಕಾರ್ಯದರ್ಶಿ ಅಲ್ಪಸಂಖ್ಯಾತ ಘಟಕದ ಮಹಮ್ಮದ್ ಇರ್ಫಾನ್, ಸಂಘಟನಾ ಕಾರ್ಯದರ್ಶಿ ದಾದಾಪೀರ್, ಮಹಿಳಾ ಘಟಕದ ಉಪಾಧ್ಯಕ್ಷರಾಗಿ ಗಂಗಮ್ಮ, ಪ್ರಧಾನ ಕಾರ್ಯದರ್ಶಿಯಾಗಿ ರಂಜಿತ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ನಗರ ಘಟಕದ ಅಧ್ಯಕ್ಷ ಬಿ.ಮಲ್ಲೇಶ್, ಮಹಮ್ಮದ್ ಯೂಸಫ್, ಕೆ. ರವೀಂದ್ರ, ಸೈಯದ್ ಸಾದತ್, ರೇಖಾ ಬಿ.ಆಡೂರು, ಜಿಯಾವುಲ್ಲಾ ಮತ್ತಿತರರು ಉಪಸ್ಥಿತರಿದ್ದರು.

## ರಾಜ್ಯ ಕ್ರಿಕೆಟ್ ಒಕ್ಕೂಟಕ್ಕೆ ನೋಟಿಸ್

**1ನೇ ಪುಟದಿಂದ** ಘಟಕದ ಬಳಕೆಗೆ ಅಗತ್ಯವಾದ ಕೊಳಚೆ ನೀರನ್ನು ನಗರ ಪಾಲಿಕೆಯಿಂದ ಪಡೆಯಲು ವ್ಯವಸ್ಥೆ ಮಾಡದೇ ಇರುವ ಬಗ್ಗೆಯೂ ಉತ್ತರಿಸುವಂತೆ ತಿಳಿಸಲಾಗಿದೆ.

## ಕಲಾಕುಂಚದಿಂದ 'ಸಂಕ್ರಾಂತಿ ಕಾವ್ಯ ಸಂಭ್ರಮ' ರಾಜ್ಯ ಮಟ್ಟದ ಉಚಿತ ಸ್ಪರ್ಧೆ

ದಾವಣಗೆರೆ, ಡಿ. 11-ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಸಂಕ್ರಾಂತಿ ಪ್ರಯುಕ್ತ ರಾಜ್ಯ ಮಟ್ಟದ 'ಸಂಕ್ರಾಂತಿ ಕಾವ್ಯ ಸಂಭ್ರಮ' ಉಚಿತ ಕವನ ಬರೆಯುವ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ತೀರ್ಪುಗಾರ ರಲ್ಲಿ ಒಬ್ಬರಾದ ಕವಯತ್ರಿ, ಸಾಹಿತಿ ಶ್ರೀಮತಿ ಅನ್ನಪೂರ್ಣ ಪಾಟೀಲ್ ತಿಳಿಸಿದ್ದಾರೆ.

ಸಂಕ್ರಾಂತಿ ಕುರಿತಂತೆ 15 ರಿಂದ 20 ಸಾಲುಗಳ ಕವನ ಬರೆದು 31-12-2024ರೊಳಗೆ ಕನ್ನಡದಲ್ಲಿ ತಮ್ಮ ವಿಳಾಸ ವ್ಯಾಟ್ಸ್ಯಾಪ್ ಸಂಖ್ಯೆಯೊಂದಿಗೆ 9481909864 ಈ ಸಂಖ್ಯೆಗೆ ಕಳುಹಿಸಬೇಕು.

ಆಂಗ್ಲ ಭಾಷೆಯಲ್ಲಿ ವಿಳಾಸ ಕಳಿಸಿದರೆ ಸ್ವೀಕರಿಸುವುದಿಲ್ಲ. ಯಾವುದೇ ಸಭೆ, ಸಮಾರಂಭ ಇರುವುದಿಲ್ಲ ಬಹುಮಾನ ವಿಜೇತರಿಗೆ ಮಾತ್ರ ಫಲಿತಾಂಶ ಅಭಿನಂದನಾ ಪತ್ರ ಸ್ಪರ್ಧಿಗಳು ಕೊಟ್ಟ ವ್ಯಾಟ್ಸ್ಯಾಪ್ ಸಂಖ್ಯೆಗೆ ಕಳಿಸಲಾಗುವುದು ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## 'ಹರಿಹರ ಶ್ರೀ' ಪ್ರಶಸ್ತಿಗೆ ಕವನ ಆಹ್ವಾನ

ಹರಿಹರ,ಡಿ.11- ನಗರದ ಸಾಹಿತ್ಯ ಸಂಗಮ ಸಂಸ್ಥೆಯಿಂದ ಕೊಡ ಮಾಡಲ್ಪಡುವ 'ಹರಿಹರ ಶ್ರೀ' ಪ್ರಶಸ್ತಿಗೆ 2023 ರಲ್ಲಿ ಪ್ರಕಟಣೆಯಾದಂತಹ ಕವನ ಸಂಕಲನಗಳನ್ನು ಆಹ್ವಾನಿಸಲಾಗಿದೆ ಎಂದು ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ. ಕೊಟ್ರೇಶ್ ತಿಳಿಸಿದ್ದಾರೆ.

ಪ್ರಶಸ್ತಿಯು ನಗದು ಹಾಗೂ ಪ್ರಶಸ್ತಿ ಫಲಕಗಳನ್ನು ಒಳಗೊಂಡಿರುತ್ತದೆ. 2023ರಲ್ಲಿ ಪ್ರಕಟಣೆಯಾದಂತಹ ಮೂರು ಕವನ ಸಂಕಲನಗಳನ್ನು ಡಿ. 25 ರೊಳಗಾಗಿ ವಿ.ಬಿ ಕೊಟ್ರೇಶಪ್ಪ, ಶ್ರೀ ಕುರುವತ್ತಿ ಬಸವೇಶ್ವರ ನಿಲಯ. ಮೂರನೇ ಮುಖ್ಯರಸ್ತೆ. ನಾಲ್ಕನೇ ಅಡ್ಡರಸ್ತೆ, 'ಬಿ' ಬ್ಲಾಕ್ ವಿದ್ಯಾನಗರ. ಹರಿಹರ. ದಾವಣಗೆರೆ ಜಿಲ್ಲೆ- 577601 ತಲುಪಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : ಸುರೇಶ್ ಸ್ವಾಮಿ ಕಾರ್ಯದರ್ಶಿಗಳು :7795120617, ವಿ ಬಿ ಕೊಟ್ರೇಶಪ್ಪ ಅಧ್ಯಕ್ಷರು 9844969723 ಗೆ ಸಂಪರ್ಕಿಸಲು ಮನವಿ ಮಾಡಲಾಗಿದೆ.

# ಮಲೇಬೆನ್ನೂರಿಗೆ ಭೇಟಿ ನೀಡಿದ್ದ ಎಸ್.ಎಂ. ಕೃಷ್ಣ





ಮಲೇಬೆನ್ನೂರು, ಡಿ. 11- ಮಂಗಳವಾರ ವಿಧಿವಶರಾದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು 2009ರಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪರ ಚುನಾವಣಾ ಪ್ರಚಾರಕ್ಕಾಗಿ ಮಲೇಬೆನ್ನೂರಿಗೆ ಆಗಮಿಸಿದ್ದರು.

ಕೊಮಾರನಹಳ್ಳಿ ಸಮೀಪದ ಗುಡ್ಡದ ಜಮೀನಿನಲ್ಲಿ ತಾತ್ಕಾಲಿಕವಾಗಿ ತಯಾರು ಮಾಡಿದ್ದ ಹೆಲಿಪ್ಯಾಡ್‌ನಲ್ಲಿ ಎಸ್.ಎಂ. ಕೃಷ್ಣ ಅವರು ಆಗಮಿಸಿದ್ದ ಹೆಲಿಕ್ಯಾಪ್ಟರ್ ಅನ್ನು ಲ್ಯಾಂಡಿಂಗ್ ಮಾಡಿಸಲಾಗಿತ್ತು.

ನಂತರ ಅವರು, ಮಲೇಬೆನ್ನೂರಿನ ನೀರಾವರಿ ಇಲಾಖೆಯ ಮೈದಾನದಲ್ಲಿ ಏರ್ಪಡಿಸಿದ್ದ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಎಸ್.ಎಸ್. ಮಲ್ಲಿಕಾರ್ಜುನ್ ಪರವಾಗಿ ಮತಯಾಚನೆ ಮಾಡಿದ್ದರು.

ಪ್ರಚಾರ ಸಭೆ ಮುಗಿದ ಬಳಿಕ ಬೆಣ್ಣೆಹಳ್ಳಿ ಸಿದ್ದಲಿಂಗಪ್ಪ ಅವರ ಮನೆಯಲ್ಲಿ ಊಟ ಮಾಡಿಕೊಂಡು ಪುನಃ ಹೆಲಿಕ್ಯಾಪ್ಟರ್‌ನಲ್ಲಿ ಬೆಂಗಳೂರಿಗೆ ವಾಪಸ್ಸಾಗಿದ್ದರೆಂದು ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಅವರು ಎಸ್.ಎಂ. ಕೃಷ್ಣ ಅವರು ತಮ್ಮ ಮನೆಗೆ ಭೇಟಿ ನೀಡಿದ್ದ ಕ್ಷಣವನ್ನು ನೆನಪಿಸಿಕೊಂಡು ಕಣ್ಣೀರು ಹಾಕಿದರು.

ಎಸ್.ಎಂ. ಕೃಷ್ಣ ಅವರೊಂದಿಗೆ ಡಾ. ಜಿ. ಪರಮೇಶ್ವರ್, ಹೆಚ್. ಆಂಜನೇಯ, ಡಾ. ವೈ. ನಾಗಪ್ಪ, ಅಬ್ದುಲ್ ಜಬ್ಬಾರ್, ಎಸ್.ಎಸ್. ಗಣೇಶ್, ಹೆಚ್.ಜಿ. ಗುರುಸಿದ್ದಪ್ಪ, ಕೆ.ಪಿ. ಸಿದ್ದಬಸಪ್ಪ, ಡಾ. ಎಂ.ಜಿ. ರಂಗನಾಥ್, ಅಜ್ಮಲ್ ಖಾನ್, ಕೊಕ್ಕನೂರು ಸೈಯದ್ ಖಾಸಿಂ ಸಾಬ್, ದ್ಯಾಮಣ್ಣ, ಡಾ. ಬಿ. ಚಂದ್ರಶೇಖರ್, ಪಿ.ಎಸ್. ಹನುಮಂತಪ್ಪ, ಎಂ.ಬಿ. ರೋಷನ್ ಸಾಬ್, ಎ. ಆಸೀಫ್ ಅಲಿ, ತಳಸದ ಬಸವರಾಜ್, ಬೆಣ್ಣೆಹಳ್ಳಿ ಬಸವರಾಜಪ್ಪ, ಹಾಲಿವಾಣದ ಎಸ್.ಜಿ. ಪರಮೇಶ್ವರಪ್ಪ, ಕುಂಬಳೂರಿನ ಮಾಗಾನಹಳ್ಳಿ ಹಾಲಪ್ಪ, ವೈ. ವಿರೂಪಾಕ್ಷಪ್ಪ, ನಿಟ್ಟೂರು ಏಕಾಂತಪ್ಪ, ಬೇವಿನಹಳ್ಳಿ ಬಿ.ಕೆ. ನಂದಿಗೌಡ್ರು, ಜಿಗಳಿ ಆನಂದಪ್ಪ, ಹಳ್ಳಿಹಾಳ್ ವೀರನಗೌಡ, ಮಲ್ಲನಗೌಡ, ಚಂದ್ರಶೇಖರ್, ಕೊಮಾರನಹಳ್ಳಿ ಎಸ್. ರಂಗಪ್ಪ, ಶ್ರೀಮತಿ ಸರೋಜಮ್ಮ ಭರಮಗೌಡ, ಕೆ.ಜಿ. ಮಂಜುನಾಥ್, ಶಿವನಳ್ಳಿ ರಮೇಶ್, ಸುರೇಶ್ ಸೇರಿದಂತೆ ಇನ್ನೂ ಅನೇಕರು ನಮ್ಮ ಮನೆಯಲ್ಲಿ ಊಟ ಮಾಡಿದ್ದರೆಂದು ಬೆಣ್ಣೆಹಳ್ಳಿ ಹಾಲೇಶಪ್ಪ ನೆನಪಿಸಿಕೊಂಡರು.

# ಬೆಳಗಾವಿ ಲಾಠಿ ಚಾರ್ಜ್ ಘಟನೆ ಖಂಡನೀಯ

## ಘಟನೆ ಸಮಗ್ರ ತನಿಖೆಗೆ ಪಂಚಮಸಾಲಿ ಜಗದ್ಗುರು ವಚನಾನಂದ ಸ್ವಾಮೀಜಿ ಒತ್ತಾಯ

ದಾವಣಗೆರೆ, ಡಿ.11- ಬೆಳಗಾವಿ ಘಟನೆಯಿಂದ ಇಡೀ ಪಂಚಮಸಾಲಿ ಸಮಾಜಕ್ಕೆ ಅಪಾರ ನೋವಾಗಿದೆ ಎಂದು ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ತಿಳಿಸಿದರು.

ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪಂಚಮಸಾಲಿಗಳು ಸಾತ್ವಿಕರು. ಸರ್ಕಾರಕ್ಕೆ ಕೆಟ್ಟ ಹೆಸರು ತರಲಿಕ್ಕೆ ಬಂದವರಲ್ಲ. ನ್ಯಾಯಯುತ ಬೇಡಿಕೆ ಈಡೇರಿಸುವಂತೆ ಒತ್ತಾಯ ಮಾಡಲು ಬಂದವರು. ಅಂತಹವರ ಮೇಲೆ ಲಾಠಿ ಚಾರ್ಜ್ ನಡೆಸಿರುವುದು ತೀವ್ರ ಖಂಡನೀಯ ಎಂದರು.

ಮಂಗಳವಾರ ಬೆಳಗಾವಿಯಲ್ಲಿ ನಡೆದ ಹೋರಾಟದ ಸಂದರ್ಭದಲ್ಲಿ ಯಾರೋ ಕಿಡಿಗೇಡಿಗಳು ಕಲ್ಲು ತೂರುವ ಮೂಲಕ ಹೋರಾಟದ ದಿಕ್ಕು ತಪ್ಪಿಸುವ ಮತ್ತು ಸಮಾಜಕ್ಕೆ ಕಪ್ಪು ಚುಕ್ಕೆ ತರುವ ಕೆಲಸ ಮಾಡಿದ್ದಾರೆ. ಸರ್ಕಾರ ಇಡೀ ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಹೋರಾಟಗಾರರ ವಿರುದ್ಧದ ಎಲ್ಲ ಪ್ರಕರಣ ರದ್ದುಪಡಿಸಬೇಕು. ಸರ್ಕಾರವೇ ಗಾಯಾಳುಗಳಿಗೆ ಚಿಕಿತ್ಸೆ ವ್ಯವಸ್ಥೆ ಮಾಡಬೇಕು. ಮುಂದೆ ಈ ರೀತಿಯಲ್ಲಿ ಎಲ್ಲಿಯೂ ಆಗದಂತೆ ಸರ್ಕಾರ ಜಾಗ್ರತೆ ವಹಿಸಬೇಕು ಎಂದು ಸ್ವಾಮೀಜಿ ಆಗ್ರಹಿಸಿದರು.

**ಸಮುದಾಯಕ್ಕೆ ಸಂಬಂಧಿಸಿದ ಯಾವುದೇ ಹೋರಾಟವೇ ಆಗಲೀ ರಾಜಕೀಯೇತರವಾಗಿರಬೇಕು. ರಾಜಕೀಯ ಬೇಳೆ ಬೇಯಿಸಿಕೊಳ್ಳಲು ವೇದಿಕೆ ಆಗಬಾರದು.**

**- ವಚನಾನಂದ ಸ್ವಾಮೀಜಿ**

ಸಮಾಜಕ್ಕೆ ಮೀಸಲಾತಿ ಕೊಡಿಸಲು ತಾವು ಸದಾ ಬದ್ಧರಾಗಿದ್ದು, ಕಾನೂನಾತ್ಮಕವಾಗಿ ಹೋರಾಟ ನಡೆಸುತ್ತಲೇ ಇದ್ದೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸರ್ಕಾರ ಪಂಚಮಸಾಲಿ ಸಮಾಜಕ್ಕೆ ಪ್ರಮಾಣವನ್ನು ಹೆಚ್ಚಿಸಿ ಮೀಸಲಾತಿ ನೀಡಬೇಕು. ಆಗ ಯಾರ ಆಕ್ಷೇಪಣೆಯೂ ಇರುವುದಿಲ್ಲ. ನ್ಯಾಯಾಲಯಕ್ಕೆ ಹೋಗುವುದಿಲ್ಲ. ಹಾಗಾಗಿಯೇ ನಾವು ಹಿಂದೆ ಮೀಸಲಾತಿ ಘೋಷಣೆ ಮಾಡಿದ್ದನ್ನು ಸ್ವಾಗತಿಸಲಿಲ್ಲ. ಈಗಲೂ ಸರ್ಕಾರ ಪ್ರಮಾಣ ಹೆಚ್ಚಳ ಮಾಡುವ ಮೂಲಕ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದರು.

ಸಮಾಜದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಮಾತನಾಡಿ, ಬೆಳಗಾವಿ ಘಟನೆಯಿಂದ ಇಡೀ ಸಮಾಜಕ್ಕೆ ಬಹಳಷ್ಟು ನೋವಾಗಿದೆ. ಈ ರೀತಿಯ ಘಟನೆ ಆಗಲೇಬಾರದಿತ್ತು. ಬೆಂಗಳೂರಿನಲ್ಲಿ 10 ಲಕ್ಷ ಜನರು ಸೇರಿದಾಗಲೇ ಇಂತಹ ಘಟನೆ ನಡೆದಿರಲಿಲ್ಲ. ಬೆಳಗಾವಿ ಘಟನೆಯನ್ನು ನಿಯಂತ್ರಿಸಬಹುದಿತ್ತು. ಇಡೀ ಘಟನೆಯ ಬಗ್ಗೆ ಸರ್ಕಾರ ಸಮಗ್ರ ತನಿಖೆ ನಡೆಸಬೇಕು. ಹೋರಾಟಗಾರರ ವಿರುದ್ದದ ಎಲ್ಲ ಪ್ರಕರಣಗಳನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

### ಕೃಷ್ಣ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಬೇಕು : ಅಶೋಕ್

**(1ನೇ ಪುಟದಿಂದ)** ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವ ಸಲ್ಲಿಸಬೇಕೆಂದು ಮನವಿ ಮಾಡಿದ್ದಾರೆ.

# ಆಧುನಿಕ ಕಾಲದಲ್ಲಿ ವಚನ ಸಾಹಿತ್ಯ ಮರೀಚಿಕೆ



ಹೊನ್ನಾಳಿ, ಡಿ.11- ಪ್ರಸಕ್ತ ದಿನಮಾನಗಳಲ್ಲಿ ಜನ-ಸಾಮಾನ್ಯರು ವಚನ ಸಾಹಿತ್ಯದಿಂದ ದೂರ ಉಳಿಯುತ್ತಿದ್ದಾರೆ ಎಂದು ತಾಲ್ಲೂಕು ಶರಣ ಸಾಹಿತ್ಯ ಪರಿಷತ್‌ನ ಮಹಾಪೋಷಕ ಡಾ. ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳು ಆತಂಕ ವ್ಯಕ್ತಪಡಿಸಿದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ಮಹಿಳಾ ವೇದಿಕೆಯ ಪದಗ್ರಹಣ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಶರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ಮಹಿಳಾ ವೇದಿಕೆಯಿಂದ ಜನಸಾಮಾನ್ಯರಿಗೆ ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ವಚನ ಸಾಹಿತ್ಯದ ಬಗೆಗೆ ಅರಿವು ಮೂಡಿಸುವ ಕಾರ್ಯದ ಜರೂರಿದೆ ಎಂದರು.

ಶರಣ ಸಾಹಿತ್ಯ ಪರಿಷತ್‌ನ ತಾಲ್ಲೂಕು ಅಧ್ಯಕ್ಷ ಎಂ.ಆರ್ ಲೋಕೇಶ್ ಮಾತನಾಡಿ, ಶರಣ ಕುಲಕ್ಕೆ ದಕ್ಕೆ ಬರದಂತೆ ವಚನ ಸಾಹಿತ್ಯದ ಚಿಂತನೆಗಳನ್ನು ಸಮಾಜದಲ್ಲಿ ಪಸರಿಸುವ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಮಾಜಿ ಶಾಸಕ ಎಂ.ಪಿ ರೇಣುಕಾಚಾರ್ಯ ಮಾತನಾಡಿ, ಲೋಕ ಕಲ್ಯಾಣಕ್ಕಾಗಿ ವಚನ ಸಾಹಿತ್ಯವನ್ನು ಪ್ರಸ್ತುತ ಹಾಗೂ ಭವಿಷ್ಯಕ್ಕಾಗಿ ಉಳಿಸುವ ಹೊಣೆಗಾರಿಕೆ ಶರಣ ಸಾಹಿತ್ಯ ಪರಿಷತ್ತಿನ ಮೇಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಕಾಲೇಜಿನ ಪ್ರಾಚಾರ್ಯ ಡಾ.ಬಿ.ಜಿ ಧನಂಜಯ ಮಾತನಾಡಿ, ಜನ ಸಾಮಾನ್ಯರಲ್ಲಿ ಕಾಯಕ, ಅನ್ನ, ಅರಿವು ಹಾಗೂ ಅಕ್ಷರಗಳ ಬಗ್ಗೆ ಆತ್ಮವಿಶ್ವಾಸ ಮೂಡಿಸುವ ಕೆಲಸವನ್ನು ಶರಣರು ಮಾಡಿದ್ದಾರೆ ಎಂದು ಸ್ಮರಿಸಿದರು.

ಇದೇ ವೇಳೆ 'ಕಲಾಶ್ರೀ ಜಯಪ್ಪ' ರಚಿಸಿದ 'ಗ್ರಾಮೀಣ ಪ್ರತಿಭೆ ಸಾಧಕ ಜೀವಿ ಎಂ.ಎಸ್ ರೇವಣಪ್ಪ' ಕೃತಿಯನ್ನು ಶ್ರೀಗಳು ಲೋಕಾರ್ಪಣೆಗೊಳಿಸಿದರು.

**ಡಾ. ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳು**

ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಕೆ.ಬಿ ಪರಮೇಶ್ವರಪ್ಪ, ಕದಳಿ ಮಹಿಳಾ ಜಿಲ್ಲಾಧ್ಯಕ್ಷೆ ಗಾಯತ್ರಿ ವಸ್ತ್ರದ್, ತಾಲ್ಲೂಕು ಕದಳಿ ವೇದಿಕೆ ಅಧ್ಯಕ್ಷೆ ಡಾ. ಪ್ರತಿಮಾ ನಿಜಗುಣ ಶಿವಯೋಗಿ, ಕೆ.ಪಿ. ದೇವೇಂದ್ರಯ್ಯ, ಡಾ. ವಿಜಯಕುಮಾರ, ಮುರುಗೆಪ್ಪಗೌಡ್ರು, ಸಾಹಿತಿಗಳಾದ ಸಂಗನಾಳಮಠ, ಪಿ.ಎಂ ಸಿದ್ದಯ್ಯ, ಎಂ.ಎಸ್ ರೇವಣಪ್ಪ, ಎಂ. ನಾಗರಾಜನಾಯ್ಕ ಇತರರು ಇದ್ದರು.

# ಜಿಲ್ಲಾ ಮಹಿಳಾ ಗಾಣಿಗ ಸಮಾಜದಿಂದ ಕಾರ್ತಿಕ



ದಾವಣಗೆರೆ, ಡಿ.11- ಜಿಲ್ಲಾ ಮಹಿಳಾ ಗಾಣಿಗರ ಸಮಾಜದ ವತಿಯಿಂದ ಕಾರ್ತಿಕ ಮಾಸದ ಪ್ರಯುಕ್ತ ನಿನ್ನೆ ಬನ್ನಿ ಮಹಾಂಕಾಳಿ ದೇವಿ ಕಾರ್ತಿಕೋತ್ಸವ ಹಮ್ಮಿಕೊಳ್ಳಲಾಗಿತ್ತು. ದಿನಾಂಕ 3 ರಂದು ವಿಶೇಷ ಚೇತನ ದಿನಾಚರಣೆ ಪ್ರಯುಕ್ತ ಸುಮಾರು 70 ವಿಶೇಷ ಚೇತನ ಮಕ್ಕಳಿಗೆ ನೃತ್ಯ ಹಾಗೂ ಏಕಪಾತ್ರ ಅಭಿನಯವನ್ನು ಏರ್ಪಡಿಸಿದ್ದೆವು. ಈ ಸಂದರ್ಭದಲ್ಲಿ ಪಿ. ವೆಂಕಟೇಶ್ ಅವರಿಗೆ ಕಾಯಕಯೋಗಿ ಎಂಬ ಬಿರುದು ನೀಡಿ ಸನ್ಮಾನಿಸಲಾಯಿತು. ನಂತರ ವಿಶೇಷ ಚೇತನ ಮಕ್ಕಳಿಂದ ಕಾರ್ತಿಕ ದೀಪವನ್ನು ಬೆಳಗಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಶ್ರೀಮತಿ ಶೋಭಾ ಪ್ರಭಾಕರ್ ವಹಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಮಹಿಳಾ ಗಾಣಿಗರ ಸಮಾಜದ ಮಹಿಳೆಯರು ಉಪಸ್ಥಿತರಿದ್ದರು.

### ವೈವಾಹಿಕ ಅತ್ಯಾಚಾರ ಅಪರಾಧಗೊಳಿಸುವ ಪ್ರಸ್ತಾಪ ಇಲ್ಲ : ಕೇಂದ್ರ

**1ನೇ ಪುಟದಿಂದ** ಸರ್ಕಾರ ರಾಜ್ಯಸಭೆಗೆ ತಿಳಿಸಿದೆ.

ಪ್ರಶ್ನೆ ಒಂದಕ್ಕೆ ಉತ್ತರ ನೀಡಿರುವ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್, ಇಂತಹ ಪ್ರಕರಣಗಳನ್ನು ಎದುರಿಸಲು ಭಾರತೀಯ ನ್ಯಾಯ ಸಂಹಿತೆ ಹಾಗೂ ಗೃಹ ಹಿಂಸಾಚಾರ ಕಾಯ್ದೆಯಲ್ಲಿ ಸಾಕಷ್ಟು ಸೆಕ್ಷನ್‌ಗಳಿವೆ ಎಂದು ಹೇಳಿದರು.

### ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಶಾಖೆ ಅಸ್ತಿತ್ವಕ್ಕೆ

ದಾವಣಗೆರೆ, ಡಿ. 11- ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘ (ಹೆಚ್.ಕೆ.ಆರ್. ಬಣ)ವನ್ನು 2025 ರ ಜನವರಿ ತಿಂಗಳಲ್ಲಿ ಅಸ್ತಿತ್ವಕ್ಕೆ ತರುವುದಾಗಿ ಅಂಗನವಾಡಿ ನಿವೃತ್ತ ಕಾರ್ಯಕರ್ತೆ ವಿಶಾಲಾಕ್ಷಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಳೆದ 40 ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ (ಎಐಟಿಯುಸಿ) ಸಂಘಟನೆಯ ಜಿಲ್ಲಾಧ್ಯಕ್ಷರಾಗಿದ್ದ ಎಂ.ಬಿ. ಶಾರದಮ್ಮ ಅವರನ್ನು ಉಚ್ಚಾಟನೆ ಮಾಡಿದ್ದರಿಂದ, ಬೇಸತ್ತು ಹೊಸ ಬಣವನ್ನು ಅಸ್ತಿತ್ವಕ್ಕೆ ತರಲಾಗುತ್ತಿದೆ ಎಂದರು.

ಸಿಪಿಐ ಜಿಲ್ಲಾ ಸಮಿತಿ ಖಜಾಂಚಿಯಾಗಿದ್ದ ಆನಂದರಾಜ್ ಅವರ ನಿಧನದ ನಂತರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘದ ಜಿಲ್ಲಾಧ್ಯಕ್ಷರಾಗಿದ್ದ ಎಂ.ಬಿ. ಶಾರದಮ್ಮ ಅವರನ್ನು, ಖಜಾಂಚಿಯಾಗಿ ನೇಮಿಸಲಾಗಿತ್ತು. ಆದರೂ ಅವರನ್ನು ಉಚ್ಚಾಟನೆ ಮಾಡಲಾಗಿದೆ. ಹಿರಿಯ ಕಾರ್ಮಿಕ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ ಅವರ ಹೆಸರನ್ನು ಉಳಿಸುವ ನಿಟ್ಟಿನಲ್ಲಿ ನೂತನ ಬಣಕ್ಕೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ನೂತನ ಸಂಘದ ಮೂಲಕವೇ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಬೇಡಿಕೆಗಳ ಈಡೇರಿಕೆಗೆ ಹೋರಾಟ ಮುಂದುವರೆಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಚೌಡಮ್ಮ, ಕಾಳಮ್ಮ, ಜೆ.ಎಂ. ಉಮಾ, ಎಂ. ಸರ್ವಮ್ಮ, ಅನಸೂಯ, ಜಲಜಾಕ್ಷಿ, ವಿಜಯ, ರೇಣುಕಾ, ರೂಪ, ದೀಪ ಉಪಸ್ಥಿತರಿದ್ದರು.

# ಇಂದು ಪುಸ್ತಕ ಪಂಚಮಿ ವಾರ್ಷಿಕೋತ್ಸವ

ದಾವಣಗೆರೆ, ಡಿ. 11- ಡಾ.ಹೆಚ್.ಎಫ್.ಕಟ್ಟಿಮನಿ ಪ್ರೌಢಶಿಕ್ಷಣ ಪ್ರತಿಷ್ಠಾನದ ವತಿಯಿಂದ ನಾಳೆ ದಿನಾಂಕ 12 ರ ಗುರುವಾರ ಮಧ್ಯಾಹ್ನ 2.30 ಕ್ಕೆ ನಗರದ ಈಶ್ವರಮ್ಮ ಪ್ರೌಢಶಾಲೆಯಲ್ಲಿ ಪುಸ್ತಕ ಪಂಚಮಿಯ 15 ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಷ್ಠಾನದ ದಾವಣಗೆರೆ ಘಟಕದ ಸಹ ಸಂಚಾಲಕ ಡಾ. ಸಿ.ಆರ್. ಬಾಣಾಪುರಮಠ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈಶ್ವರಮ್ಮ ಶಾಲಾ ಆಡಳಿತ ಮಂಡಳಿ ಅಧ್ಯಕ್ಷೆ ಸುಜಾತ ಕೃಷ್ಣ ಅಧ್ಯಕ್ಷತೆ ವಹಿಸುವರು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಜಿ.ಕೊಟ್ರೇಶ್, ದಾವಣಗೆರ-ಹರಿಹರ ಅರ್ಬನ್ ಸಹಕಾರಿ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ಲೆಕ್ಕಪರಿಶೋಧಕ ಬಸವರಾಜಪ್ಪ ಬೆಳಗಾವಿ ಆಗಮಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಶಾಲಾ ಪ್ರಾಚಾರ್ಯ ಕೆ.ಎಸ್. ಪ್ರಭುಕುಮಾರ್, ಸಹ ಪ್ರಾಚಾರ್ಯರಾದ ಶಶಿರೇಖಾ ಭಾಗವಹಿಸಲಿದ್ದಾರೆ.

ಶಿಕ್ಷಣ ಪ್ರೇಮಿ, ಅನೇಕ ಶಿಕ್ಷಣ ಸಂಸ್ಥೆಗಳಿಗೆ ಬುನಾದಿ ಹಾಕಿದ ಡಾ.ಹೆಚ್.ಎಫ್. ಕಟ್ಟಿಮನಿ ಅವರು ಪಂಚಮಿಯ ದಿನ ಜನ್ಮ ತಾಳಿದ ಕಾರಣ 'ಪುಸ್ತಕ ಪಂಚಮಿ' ಎಂಬ ಹೆಸರಿನಲ್ಲಿ ಸತತವಾಗಿ 14 ವರ್ಷಗಳಿಂದ ಈ ಕಾರ್ಯಕ್ರಮ ನಡೆದುಬಂದಿದ್ದು, ಇದೀಗ 15 ನೇ ವರ್ಷದ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ರಾಜ್ಯ ಹಾಗೂ ಹೊರ ದೇಶದ ಶಿಕ್ಷಣ ಪ್ರೇಮಿ ದಾನಿ ಗಳು ವಿಶಾಲ ಹೃದಯದಿಂದ ದೇಣಿಗೆ ನೀಡಿದ ಹಣದ ಬಡ್ಡಿ ಹಣದಲ್ಲಿ ಪ್ರತಿ ವರ್ಷ ಕಾರ್ಯಕ್ರಮ ಮಾಡುತ್ತಾ ಬರಲಾಗುತ್ತಿದೆ. ವರ್ಷದಿಂದ ವರ್ಷಕ್ಕೆ ದಾನಿಗಳ ಸಂಖ್ಯೆ ಹೆಚ್ಚುತ್ತಿದ್ದು, ಇದೀಗ 55 ದಾನಿಗಳಾಗಿರುವುದು ಅವರ ಹೃದಯ ಶ್ರೀಮಂತಿಕೆಗೆ ಸಾಕ್ಷಿ ಎಂದು ಹೇಳಿದರು.

ಕಳೆದ ವರ್ಷ 22 ಶಾಲೆಗಳ ಫಲಾನುಭವಿಗಳಿಗೆ ಪುಸ್ತಕಗಳನ್ನು ವಿತರಿಸಿ ಅವರಲ್ಲಿ ಓದುವ ಹವ್ಯಾಸ ಹೆಚ್ಚಿಸುವ ಗುರಿ ಹೊಂದಲಾಗಿತ್ತು. ಈ ಬಾರಿ 24 ಪ್ರಾಥಮಿಕ, ಪ್ರೌಢಶಾಲೆಗಳ ಬಡ ಪ್ರತಿಭಾವಂತ ಹಾಗೂ ಉತ್ತಮ ಹಾಜರಾತಿಯ 58 ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಕಾಶ್ ಬೂಸ್ನೂರು, ವಿ.ಸಿ. ಪುರಾಣಿಕ ಮಠ, ನಿರಂಜನ್ ಉಪಸ್ಥಿತರಿದ್ದರು.

# ಕಳ್ಳನ ಬಂಧನ : 3.96 ಲಕ್ಷ ರೂ. ಮೌಲ್ಯದ ಸ್ವತ್ತು ವಶ

ಜಗಳೂರು, ಡಿ.11- ಕಲ್ಯಾಣ ಮಂಟಪದಲ್ಲಿ ಕಳ್ಳತನ ಮಾಡುತ್ತಿದ್ದ ಓರ್ವ ಆರೋಪಿಯನ್ನು ಸೆರೆ ಹಿಡಿದ ಜಗಳೂರು ಪೊಲೀಸರು, 3.96 ಲಕ್ಷ ರೂ.ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳುವ ಜತೆಗೆ ಕಳ್ಳನನ್ನು ಬಂಧಿಸಿದ್ದಾರೆ.

ಸಿ. ಸಿದ್ದೇಶ್ ಬಂಧಿತ ಆರೋಪಿಯಾಗಿದ್ದು, ಈತನಿಂದ 3.85 ಲಕ್ಷ ರೂ. ಮೌಲ್ಯದ ಬಂಗಾರದ ಆಭರಣ, 10 ಸಾವಿರ ಮೌಲ್ಯದ ಮೊಬೈಲ್ ಹಾಗೂ 1500 ರೂ. ಬೆಲೆಯ ಬ್ಲೂಟೂತ್ ಜಪ್ತಿ ಮಾಡಿದ್ದು, ಆಪಾದಿತನನ್ನು ನ್ಯಾಯಾಂಗ ಬಂಧನಕ್ಕೆ ಹಾಜರು ಪಡಿಸಲಾಗಿದೆ.

ಡಿ.4ರಂದು ಜಗಳೂರು ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ 55 ಗ್ರಾಂ ಬಂಗಾರ, ಮೊಬೈಲ್, ಬ್ಲೂಟೂತ್ ಹೆಡ್‌ಸೆಟ್ ಕಳ್ಳತನವಾಗಿರುವ ಬಗ್ಗೆ ತಾಲ್ಲೂಕಿನ ನಿಬಗೂರು ಗ್ರಾಮದ ಶರಣಪ್ಪ ಅವರು ಜಗಳೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.


ಜನ್ಮ ದಿನದ ಹಾರ್ದಿಕ ಶುಭಾಶಯಗಳು

ಇಂದು ಜನ್ಮ ದಿನದ ಸಂಭ್ರಮದಲ್ಲಿರುವ ಕ್ರಿಯಾಶೀಲ, ದಿಟ್ಟ ಹೋರಾಟಗಾರ
ಯುವಕರ ಕಣ್ಮಣಿ, ನಮ್ಮ ಸಂಘದ ಅಧ್ಯಕ್ಷರು
ದಾವಣಗೆರೆ-ಹರಿಹರ ನಗಾರಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ

ಶ್ರೀ ರಾಜನಹಳ್ಳಿ ಶಿವಕುಮಾರ್ ರವರಿಗೆ

ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.







ಶುಭ ಕೋರುವವರು : ಸೂರ್ಯ ಸೇವಾ ಸಂಘ, ದಾವಣಗೆರೆ.

# ಇಂದು - ನಾಳೆ ಲಿಂ. ಡಾ. ಚಂದ್ರಮೌಳೀಶ್ವರ ಶ್ರೀ 10ನೇ ಪುಣ್ಯಾರಾಧನೆ, ಅಭಿನಂದನಾ ಸಮಾರಂಭ




ಹರಪನಹಳ್ಳಿ ಪಟ್ಟಣದ ತೆಗ್ಗಿನ ಮಠದ ಆವರಣದಲ್ಲಿ ಇಂದು ಮತ್ತು ನಾಳೆ ಶುಕ್ರವಾರ ಮಠದ ಲಿಂಗೈಕ್ಯ ಡಾ.ಚಂದ್ರಮೌಳೀಶ್ವರ ಶಿವಾಚಾರ್ಯ ಸ್ವಾಮೀಜಿಯ 10ನೇ ಪುಣ್ಯಾರಾಧನೆ ಮತ್ತು ಶ್ರೀಗಳ ಮರಣೋತ್ತರ ಗೌರವ ಡಾಕ್ಟರೇಟ್ ಪದವಿ ಅಭಿನಂದನಾ ಸಮಾರಂಭ ಮತ್ತು ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ ಪಟ್ಟಾಧಿಕಾರದ 9ನೇ ವಾರ್ಷಿಕೋತ್ಸವ ಸಮಾರಂಭ ಜರುಗಲಿದೆ ಎಂದು ಮಠದ ಆಡಳಿತಾಧಿಕಾರಿ ಡಾ.ಟಿ.ಎಂ.ಚಂದ್ರಶೇಖರಯ್ಯ ತಿಳಿಸಿದ್ದಾರೆ.

ಇಂದು ಬೆಳಗ್ಗೆ 10.30ಕ್ಕೆ ಲಿಂ. ಶ್ರೀ ಡಾ. ಚಂದ್ರಮೌಳೀಶ್ವರ ಶಿವಾಚಾರ್ಯ ಸ್ವಾಮೀಜಿ 10ನೇ ವಾರ್ಷಿಕ ಪುಣ್ಯಾರಾಧನೆ ಮತ್ತು ಪ್ರಸ್ತುತ ಶ್ರೀಗಳ ಪಟ್ಟಾಧಿಕಾರದ 9ನೇ ವಾರ್ಷಿಕೋತ್ಸವದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಅಧ್ಯಕ್ಷತೆಯನ್ನು ಮಾನಿಹಳ್ಳಿ ಪುರವರ್ಗ ಮಠದ ಶ್ರೀ ಮಳೆಯೋಗೀಶ್ವರ ಶಿವಾಚಾರ್ಯ ಶ್ರೀ ವಹಿಸಲಿದ್ದು, ನೇತೃತ್ವವನ್ನು ಶ್ರೀ ವರಸದ್ಯೋಜಾತ ಶಿವಾಚಾರ್ಯ ಶ್ರೀಗಳು ವಹಿಸಲಿದ್ದಾರೆ, ಕರ್ನಾಟಕ ಸುವರ್ಣ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಟಿ. ಎಂ.ಚಂದ್ರಶೇಖರಯ್ಯ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಹಾವೇರಿ ಜಿಲ್ಲಾ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಪೂಜಾರ ವೀರಮಲ್ಲಪ್ಪ, ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಐ.ದಾರುಕೇಶ, ಟಿ.ಎಂ.ವಿಜಯಕುಮಾರ್ ಸೇರಿದಂತೆ ಇತರೆ ಗಣ್ಯರು ಆಗಮಿಸಲಿದ್ದಾರೆ.

ಇಂದು ಸಂಜೆ 5.30ಕ್ಕೆ ಲಿಂ. ಶ್ರೀ ಡಾ. ಚಂದ್ರಮೌಳೀಶ್ವರ ಶಿವಾಚಾರ್ಯ ಶ್ರೀಗಳಿಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವ ವಿದ್ಯಾಲಯ ಮರಣೋತ್ತರ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದ ಹಿನ್ನೆಲೆಯಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಂಡಿದ್ದು, ಸಮಾರಂಭದ ಸಾನ್ನಿಧ್ಯವನ್ನು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶ್ರೀಗಳು ವಹಿಸುವರು.

ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಹೊಸಪೇಟೆ ಕಟ್ಟಡ ವಿಭಾಗದ ಮುಖ್ಯಸ್ಥ ಡಾ. ಟಿ.ಎಂ. ವಿಶ್ವನಾಥ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ವಿಎಸ್‌ಕೆ ವಿಶ್ವವಿದ್ಯಾಲಯದ ಕುಲಸಚಿವ ಕೆ.ಎನ್.ರುದ್ರೇಶ, ಸಿಂಡಿಕೇಟ್ ಸದಸ್ಯ ಸುರೇಶ್, ಆರ್.ಸಜ್ಜನ್, ಟಿ.ಎಂ.ರಾಜಶೇಖರ್, ಟಿ.ಎಂ.ಶಿವಶಂಕರ್ ಸೇರಿದಂತೆ ಇತರೆ ಗಣ್ಯರು ಉಪಸ್ಥಿತರಿರಲಿದ್ದಾರೆ.

ನಾಳೆ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಸಮಾರಂಭದ ಸಾನ್ನಿಧ್ಯವನ್ನು ಬಾಳೆಹೊನ್ನೂರು ಶ್ರೀಪೀಠದ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ಶ್ರೀಗಳು ವಹಿಸಲಿದ್ದು, ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ, ತೆಗ್ಗಿನಮಠದ ಕಾರ್ಯದರ್ಶಿ ಡಾ.ಟಿ.ಎಂ.ಚಂದ್ರಶೇಖರಯ್ಯ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಪಿ.ಕೆ. ಎಂ ಪ್ರಶಾಂತ್, ವಿಶ್ವನಾಥ್ ಹಿರೇಮಠ್, ಟಿ.ಎಂ. ಪ್ರತೀಕ್, ಸಮಾಜ ಸೇವಕರಾದ ಲಲಿತಮ್ಮ, ಸಿಪಿಐ ನಾಗರಾಜ, ಎಂ.ಕಮ್ಮಾರ, ಪಿಎಸ್‌ಐ ಶಂಭುಲಿಂಗ ಹಿರೇಮಠ್ ಸೇರಿದಂತೆ ಇತರರು ಉಪಸ್ಥಿತರಿರುವರು.

## ಎಸ್.ಎಂ. ಕೃಷ್ಣ ಪಂಚಭೂತಗಳಲ್ಲಿ ಲೀನ

**1ನೇ ಪುಟದಿಂದ** ಸಲ್ಲಿಸಿದರು. ಅಸಂಖ್ಯಾತ ಅಭಿಮಾನಿಗಳ ಅಂತಿಮ ದರ್ಶನಕ್ಕೆ ದಾರಿಯುದ್ದಕ್ಕೂ ಅವಕಾಶ ಮಾಡಿಕೊಟ್ಟ ಕಾರಣ ಬೆಳಗ್ಗೆ 10 ಗಂಟೆಗೆ ಹುಟ್ಟೂರು ತಲುಪಬೇಕಿದ್ದ ಪಾರ್ಥಿವ ಶರೀರ ಮಧ್ಯಾಹ್ನ 2-30ಕ್ಕೆ ತಲುಪಿತು.

ಅಗಲಿದ ತಮ್ಮ ನಾಯಕನ ಅಂತಿಮ ದರ್ಶನ ಪಡೆಯಲು ಬೆಳಗ್ಗೆಯಿಂದಲೇ ಸಾಲುಗಟ್ಟಿ ನಿಂತಿದ್ದ ಜನರು ಪಾರ್ಥಿವ ಶರೀರ ಆಗಮಿಸುತ್ತಿದ್ದಂತೆ ಕಣ್ಣೀರ ಕೋಡಿ ಹರಿಸಿದರು.

ಸರ್ಕಾರಿ ಗೌರವದ ನಂತರ ಕೃಷ್ಣ ಅವರ ಪಾರ್ಥಿವ ಶರೀರಕ್ಕೆ ಕುಟುಂಬ ವರ್ಗ ಒಕ್ಕಲಿಗ ಸಮುದಾಯದ ವಿಧಿವಿಧಾನದಂತೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

# ವೀರೇಂದ್ರ ಹೆಗ್ಗಡೆಯವರ ಸ್ವಾಸ್ಥ್ಯ ಸಮಾಜದ ಪರಿಕಲ್ಪನೆ ಮಾದರಿ : ಸಿರಿಗೆರೆ ಸಿದ್ದೇಶ್



## ಹಾಲಿವಾಣದಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ

ಮಲೇಬೆನ್ನೂರು, ಡಿ. 11- ಸಾಮಾಜಿಕ ಜವಾಬ್ದಾರಿ ಹೊತ್ತಿರುವ ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಅವರು ಸ್ವಾಸ್ಥ್ಯ ಸಮಾಜ ನಿರ್ಮಾಣದ ಪರಿಕಲ್ಪನೆ ಹೊಂದುವ ಮೂಲಕ ಸಮಾಜದಲ್ಲಿ ಹೊಸ ಬದಲಾವಣೆಗೆ ಮುನ್ನುಡಿ ಬರೆದಿದ್ದಾರೆ ಎಂದು ಆಧ್ಯಾತ್ಮಕ ಪ್ರವಚನಕಾರ ಸಿರಿಗೆರೆ ಸಿದ್ದೇಶ್ ಹೇಳಿದರು.

ಅವರು ಸೋಮವಾರ ಹಾಲಿವಾಣ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಎಂದರೆ ಬರೀ ಮಹಿಳೆಯರಿಗೆ ಸಾಲ ಕೊಡುವುದಲ್ಲ. ಧರ್ಮಸ್ಥಳ ಯೋಜನೆ ಎಲ್ಲಾ ವರ್ಗಗಳ ಜನರಿಗೆ ಉಪಯುಕ್ತ ಸೇವೆ ಒದಗಿಸುವ ಸರ್ಕಾರವಾಗಿದ್ದು, ವಿಶೇಷವಾಗಿ ಗ್ರಾಮೀಣ ಜನರ ಬದುಕಿಗೆ ಭರವಸೆಯ ಬೆಳಕು ಮೂಡಿಸಿದೆ.

ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಪ್ರತಿ ವರ್ಷ 20ರಿಂದ 50 ಸಾವಿರ ರೂ.ಗಳವರೆಗೆ ವಿದ್ಯಾರ್ಥಿ ವೇತನ ನೀಡುವ ಡಾ. ವೀರೇಂದ್ರ ಹೆಗ್ಗಡೆ ಅವರು ದುಶ್ಚಟಗಳ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವನ್ನು ಪ್ರೌಢಶಾಲಾ ಹಂತದಲ್ಲೇ ಮಾಡುತ್ತಿದ್ದಾರೆ.

ಈ ಮೂಲಕ ವಿದ್ಯಾರ್ಥಿಗಳಿಗೆ ದುಶ್ಚಟಗಳಿಂದ ಆಗುತ್ತಿರುವ ತೊಂದರೆಗಳನ್ನು ತಿಳಿಸುವ ಜೊತೆಗೆ ಅವರ ಮೂಲಕ ಪೋಷಕರನ್ನೂ ದುಶ್ಚಟಗಳಿಂದ ಮುಕ್ತಿಗೊಳಿಸುವ ಪ್ರಯತ್ನವಾಗಿದೆ ಎಂದು ತಿಳಿಸಿದ ಸಿದ್ದೇಶ್ ಅವರು, ಡಾ. ಅಂಬೇಡ್ಕರ್ ಅವರು ಹೇಳಿದಂತೆ ವಿದ್ಯೆಯಿಂದ ಮಾತ್ರ ಪರಿವರ್ತನೆ ಸಾಧ್ಯ. ಜೊತೆಗೆ ವಿದ್ಯೆ ಸ್ಪರ್ಧಾತ್ಮಕ ಜಗತ್ತು ಕೂಡಾ ಆಗಿದ್ದು, ವಿದ್ಯಾರ್ಥಿಗಳು ಏಕಾಗ್ರತೆಯಿಂದ ಮತ್ತು ಆಸಕ್ತಿಯಿಂದ ಪಾಠ, ಪ್ರವಚನ ಕೇಳಿ ಪ್ರಗತಿ ಸಾಧಿಸಬೇಕೆಂದರು.

ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂದ ದೇವಾಡಿಗ ಮಾತನಾಡಿ, ಬಲಿಷ್ಠ ದೇಶಕ್ಕೆ ಸ್ವಾಸ್ಥ್ಯ ಸಮಾಜದ ಅಗತ್ಯವಾಗಿದ್ದು, ವಿದ್ಯಾರ್ಥಿಗಳು ಜೀವನದಲ್ಲಿ ಎಂದೂ ದುಶ್ಚಟಗಳತ್ತ ಮುಖ ಮಾಡದೇ ಶಿಕ್ಷಣ, ಸಂಸ್ಕಾರ ಸೇವೆ ಕಡೆಗೆ ಗಮನ ಹರಿಸಬೇಕೆಂಬುದು ಡಾ. ಹೆಗ್ಗಡೆ ಅವರ ಆಶಯವಾಗಿದೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಹಾಗೂ ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಹಾಗೂ ಪತ್ರಕರ್ತ ಜಿಗಳಿ ಪ್ರಕಾಶ್, ಯೋಜನೆಯ ವಲಯ ಮೇಲ್ವಿಚಾರಕಿ ರಕ್ಷಿತಾ, ಶಾಲಾ ಮುಖ್ಯ ಶಿಕ್ಷಕಿ ಪರಿಮಳ, ಶಿಕ್ಷಕಿ ಮರುಳಸಿದ್ದಮ್ಮ, ಶಿಕ್ಷಕ ಮಾಲತೇಶ್ ಮಾತನಾಡಿದರು.

ಶಿಕ್ಷಕಿಯರಾದ ಸರಿತಾ, ವೀಣಾ, ರೂಪಾ, ಎಸ್‌ಡಿಎಂಸಿ ಅಧ್ಯಕ್ಷ ಶಿವಕ್ಕ ಆಂಜನೇಯ, ಸೇವಾ ಪ್ರತಿನಿಧಿಗಳಾದ ಚಂದ್ರಕಲಾ, ಶೃತಿ, ವಿಎಲ್‌ವಿ ಜ್ಯೋತಿ ಹಾಜರಿದ್ದರು.

## ಸ್ವಾವಲಂಬನೆಯಿಂದ ಅಭಿವೃದ್ಧಿ

**1ನೇ ಪುಟದಿಂದ** ಮಾತನಾಡುತ್ತಾ, ಪ್ರಪಂಚದಲ್ಲಿಯೇ ಅತ್ಯುತ್ತಮ ಸಂಸ್ಕೃತಿಯುಳ್ಳ ದೇಶ ಭಾರತ. ಆದರೆ ಯುವ ಪೀಳಿಗೆ ಸಂಸ್ಕೃತಿ, ಸಂಸ್ಕಾರದಿಂದ ದೂರವಾಗುತ್ತಿದ್ದಾರೆ. ವಿದೇಶಿ ಸಂಸ್ಕೃತಿಯ ವ್ಯಾಮೋಹ ಹೆಚ್ಚಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕೂಡು ಕುಟುಂಬಗಳು ಮರೆಯಾಗುತ್ತಿವೆ. ಪತಿ-ಪತ್ನಿಯೇ ಕುಟುಂಬ ಎಂಬಂತಾಗಿದೆ. ಕಷ್ಟಪಟ್ಟು ಓದಿಸಿದ ಮಕ್ಕಳು ವಿದೇಶಕ್ಕೆ ತೆರಳಿದಾಗ ಹೆತ್ತವರು ವೃದ್ಧಾಶ್ರಮಕ್ಕೆ ಸೇರುತ್ತಿದ್ದಾರೆ ಇದು ನೋವಿನ ವಿಚಾರ ಎಂದರು.

ಭ್ರಷ್ಟಾಚಾರ ಹಾಗೂ ಜಾತೀಯತೆ ಇಲ್ಲದಿದ್ದರೆ ಭಾರತ ಪ್ರಾಯಶಃ ಪ್ರಪಂಚದಲ್ಲಿ ನಂ.1 ದೇಶವಾಗುತ್ತಿತ್ತು. ಸ್ಥಳೀಯ ಸೌಲಭ್ಯ, ಅವಕಾಶಗಳನ್ನು ಬಳಸಿಕೊಂಡು ಸ್ವದೇಶಿ ಉದ್ಯಮಗಳನ್ನು ಸ್ಥಾಪಿಸುವತ್ತ ಯುವ ಜನರು ಒಲವು ತೋರಬೇಕು. ಇಂತಹ ಕಾರ್ಯಗಳಿಗೆ ಪ್ರೋತ್ಸಾಹಿಸಬೇಕೆಂದರು.

ಮೇಳದ ಸಂಯೋಜಕ ಎಸ್.ಟಿ. ವೀರೇಶ್ ಮಾತನಾಡಿ, ಸ್ವದೇಶಿ ವಸ್ತು, ಭಾಷೆ, ಆಹಾರ ಪದ್ಧತಿ ಬಗ್ಗೆ ಅರಿವು ಮೂಡಿಸುವ ಹಾಗೂ ಸ್ವದೇಶಿ ಉದ್ದಿಮೆಗಳಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಮೇಳ ಆಯೋಜಿಸಲಾಗಿದೆ. 21 ಆಹಾರ ಮಳಿಗೆಗಳೂ ಸೇರಿ 250 ಮಳಿಗೆಗಳಿವೆ ಎಂದು ಹೇಳಿದರು. ಸಂಚಾಲಕರಾದ ಮಂಜುಳ ಮಹೇಶ್, ಸಂಘಟಕರಾದ ಚೇತನ್ ಎಸ್. ಉಪಸ್ಥಿತರಿದ್ದರು.

ಸ್ವದೇಶಿ ಮೇಳದಲ್ಲಿ 200ಕ್ಕೂ ಹೆಚ್ಚು ಮಳಿಗೆಗಳಲ್ಲಿ ಸ್ವದೇಶಿ ವಸ್ತುಗಳ ಮಾರಾಟ ನಡೆಯಿತು. ಗೃಹೋಪಯೋಗಿ ವಸ್ತುಗಳು, ಮಹಿಳೆಯರು, ಪುರುಷರು ಹಾಗೂ ಮಕ್ಕಳ ಉಡುಪುಗಳು, ಅಲಂಕಾರಿಕ ವಸ್ತುಗಳು, ಬಾಯಲ್ಲಿ ನೀರೂರಿಸುವಂತಹ ತಿನಿಸುಗಳು ಮಾರಾಟಕ್ಕೆ ಲಭ್ಯವಿದ್ದವು.

ಇನ್ನು ಆಹಾರಕ್ಕೆ ಸಂಬಂಧಿಸಿದ ಮಳಿಗೆಗಳಲ್ಲಿ ಅಕ್ಕಿರೊಟ್ಟಿ, ತಾಲಿಪಟ್ಟು, ಮಶ್ರೂಮ್ ಬಿರಿಯಾನಿ, ಜೋಳದ ಅಂಬಲಿ, ಆಯುರ್ವೇದ ಉಪಹಾರಗಳು, ಕಶಾಯ ಸೇರಿದಂತೆ ಹಲವಾರು ಮಳಿಗೆಗಳಿದ್ದವು

## ದೀಪ, ವಸ್ತ್ರ ದಾನದಿಂದ ಪುಣ್ಯ

**1ನೇ ಪುಟದಿಂದ** ಮಾಡಿದರು. ಈ ವೇಳೆ ಡಿವಿಎಸ್ ವಿದ್ಯಾಸಂಸ್ಥೆಯ ಗುರುಸಿದ್ದೇಶ್ವರ್, ಲತಾ, ಪತ್ರಕರ್ತ ಅನಂತಪದ್ಮನಾಭರಾವ್, ಸಾಲಿಗ್ರಾಮ ಗಣೇಶ್ ಶೆಣೈ, ಸುಷಮೀಂದ್ರ ಮತ್ತು ಇತರರು ಇದ್ದರು.

# ದೇಶದ ಸಮಾನತೆಗೆ ಅಂಬೇಡ್ಕರ್ ಕೊಡುಗೆ ಅಪಾರ

## ದಾವಿವಿಯಲ್ಲಿ 'ಪರಿನಿರ್ವಾಣ ದಿವಸ' ದಲ್ಲಿ ಪ್ರಾಧ್ಯಾಪಕ ಡಾ.ಎಂ.ಯು ಲೋಕೇಶ್



ದಾವಣಗೆರೆ,ಡಿ. 11- ಜಾತಿಯತೆ ತೊಲಗಿಸಿ ದೇಶದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಮಾನತೆಯನ್ನು ಸಂವಿಧಾನದ ಮೂಲಕ ಅನುಷ್ಠಾನಕ್ಕೆ ತರುವಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಪ್ರಾಮಾಣಿಕ ಪ್ರಯತ್ನ ಮಾಡಿದ್ದರು ಎಂದು ಪ್ರಾಧ್ಯಾಪಕ ಡಾ. ಎಂ.ಯು ಲೋಕೇಶ್ ಅಭಿಪ್ರಾಯಿಸಿದರು.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲಾಗಿದ್ದ 68ನೇ ಡಾ.ಬಿ.ಆರ್ ಅಂಬೇಡ್ಕರ್ ಪರಿನಿರ್ವಾಣ ದಿವಸ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಬುದ್ಧ, ಬಸವಣ್ಣನವರ ನಂತರ ಸಮಾನತೆ, ಸಮಸಮುದಾಯ ಅಭಿವೃದ್ಧಿಯ ತತ್ವ ಆದರ್ಶಗಳನ್ನು ಜಾರಿಗೊಳಿಸಿ ನವ ಸಮಾಜದ ಪರಿಕಲ್ಪನೆಯನ್ನು ಪ್ರತಿಷ್ಠಾಪಿಸಲು ಡಾ.ಅಂಬೇಡ್ಕರ್ ಯತ್ನಿಸಿದರು. ದೇಶದಲ್ಲಿ ಅಸ್ಪೃಶ್ಯತೆ, ಅಸಮಾನತೆ, ಅನಕ್ಷರತೆ, ಮೂಢನಂಬಿಕೆಯಂತಹ ಅಂಧಕಾರದಿಂದ ಕೂಡಿದ ಸಮಾಜವನ್ನು ಪರಿವರ್ತಿಸಿ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಕೈಜೋಡಿಸುವಂತೆ ಮಾಡುವಲ್ಲಿ ಅಂಬೇಡ್ಕರ್ ಅವರ ಕೊಡುಗೆ ಅಪಾರವಾದುದು ಎಂದು ಅವರು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಬದಲಾವಣೆಯ ಮಾತುಗಳಾಡಿ ದೇಶದಲ್ಲಿ ಶಾಂತಿ ಕದಡುವ ಕೆಲಸ ನಡೆಯುತ್ತಿದೆ, ವಿದ್ಯಾರ್ಥಿಗಳು ಅದಕ್ಕೆ ಅವಕಾಶ ನೀಡದೆ ಅಂಬೇಡ್ಕರ್ ಅವರ ಆಶಯವನ್ನು ರಕ್ಷಿಸುವ ಕೆಲಸಕ್ಕೆ ಮುಂದಾಗಬೇಕು, ಪಟ್ಟಬದ್ಧ ಹಿತಾಸಕ್ತಿಗಳಿಗೆ ಅವಕಾಶ ನೀಡದೆ ಜಾಗೃತರಾಗಿ, ಮತದಾನದ ಮೂಲಕ ನಮ್ಮ ಹಕ್ಕುಗಳನ್ನು ರಕ್ಷಿಸುವ ಸರ್ಕಾರವನ್ನು ರೂಪಿಸಲು ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಕುಲಸಚಿವ ಡಾ.ಯು.ಎಸ್.ಮಹಾಬಲೇಶ್ವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಸತ್ಯ, ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡು ದೇಶದಲ್ಲಿ ಉತ್ತಮವಾದ ಪ್ರಜೆಗಳಾಗಿ ಬಾಳಬೇಕು. ಡಾ.ಅಂಬೇಡ್ಕರ್ ಅವರ ಬದುಕು, ಮೌಲ್ಯ, ಸಂದೇಶಗಳನ್ನು ಪ್ರೇರಣೆಯಾಗಿ, ಮಾರ್ಗದರ್ಶಕ ಸೂತ್ರವಾಗಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಎಸ್‌ಸಿ, ಎಸ್‌ಟಿ ವಿದ್ಯಾರ್ಥಿ ಅಭಿವೃದ್ಧಿ ಘಟಕದ ಸಂಚಾಲಕ ಡಾ.ನಿರಂಜನ್.ಎಂ.ಹೆಚ್ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡೀನ್ ಪ್ರೊ.ಆರ್.ಶಶಿಧರ್, ಐಕ್ಯೂಎಸಿ ನಿರ್ದೇಶಕ ಪ್ರೊ.ಗೋವಿಂದಪ್ಪ ಉಪಸ್ಥಿತರಿದ್ದರು.

## ಜಮ್ಮು-ಕಾಶ್ಮೀರದಲ್ಲಿ ಜಾತಿ ಸಮೀಕ್ಷೆ ಅಗತ್ಯವಿದೆ: ತಾರಿಕ್

**1ನೇ ಪುಟದಿಂದ** ಕಾಂಗ್ರೆಸ್‌ನ ಜಮ್ಮು ಮತ್ತು ಕಾಶ್ಮೀರ ಘಟಕದ ಅಧ್ಯಕ್ಷ ತಾರಿಕ್ ಹಮೀದ್ ಕರ್ರಾ ಮಂಗಳವಾರ ಹೇಳಿದ್ದಾರೆ.

ಮೀಸಲಾತಿ ಹಂಚಿಕೆ ನ್ಯಾಯದ ಆಧಾರದ ಮೇಲೆ ಇರಬೇಕು ಎಂದು ನಾವು ನಂಬುತ್ತೇವೆ. ಆದರೆ, ಅದಕ್ಕಾಗಿ ಜಾತಿ ಗಣತಿ ಮಾಡುವುದು ಅವಶ್ಯಕ ಎಂದವರು ತಿಳಿಸಿದರು.

## ಹರಿಹರೇಶ್ವರ ಅರ್ಬನ್ ಬ್ಯಾಂಕ್ ಅಧ್ಯಕ್ಷರಾಗಿ ಮಲ್ಲಿಕಾರ್ಜುನ್



**1ನೇ ಪುಟದಿಂದ** ಅನ್ವರ್ ಪಾಷಾ, ಕೆ. ಅಣ್ಣಪ್ಪ, ಪರಶುರಾಮ್ ಅಂಬೇಕರ್, ವಿದ್ಯಾ ಆರ್. ಮೆಹರ್ವಾಡೆ, ಜಿ. ವಿ. ಪ್ರವೀಣ್ ಕುಮಾರ್, ಹೆಚ್.ಆರ್. ವೀಣಾ, ಬಿ. ಆರ್. ಈಶ್ವರ್, ಸಿಬ್ಬಂದಿಗಳಾದ ರೇಖಾ ಮೆಹರ್ವಾಡೆ, ಸಿ. ಪ್ರಕಾಶ್, ಶಶಿಕಲಾ ಪರಶುರಾಮ್, ಸತ್ಯನಾರಾಯಣ ರಾವ್, ಸಿ. ಪ್ರಶಾಂತ್, ಎ. ಶಿವಕುಮಾರ್, ಬಿಂದು ಇತರರು ಹಾಜರಿದ್ದರು.

## ರೈಲ್ವೆ ಮಸೂದೆಗೆ ಲೋಕಸಭೆ ಅಸ್ತು

**1ನೇ ಪುಟದಿಂದ** ಮೂವತ್ತು ವರ್ಷಗಳಲ್ಲಿ ವಲಯದಲ್ಲಿ ಹೂಡಿಕೆಯ ಕೊರತೆ ಇದೆ ಹೇಳಿದರು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 2014ರಲ್ಲಿ ಅಧಿಕಾರ ವಹಿಸಿಕೊಂಡಾಗ ರೈಲ್ವೆ ಬಜೆಟ್ ಗಾತ್ರ 30 ಸಾವಿರ ಕೋಟಿ ರೂಗಳಷ್ಟಿತ್ತು. ಈಗ ಬಜೆಟ್‌ನಲ್ಲಿ ರೈಲ್ವೆಗೆ 2.52 ಲಕ್ಷ ಕೋಟಿ ರೂ. ನೀಡಲಾಗುತ್ತಿದೆ ಎಂದು ಹೇಳಿದರು.

ಆದರೆ ಈ ಮಸೂದೆ ಕಾರಣದಿಂದ ರೈಲ್ವೆ ಖಾಸಗಿಕರಣವಾಗಲಿದೆ ಎಂದು ಪ್ರತಿಪಕ್ಷಗಳ ಸದಸ್ಯರು ಆರೋಪಿಸಿದ್ದರು. ಈ ಮಸೂದೆಯನ್ನು ಜಂಟಿ ಸದನ ಸಮಿತಿಯ ಪರಿಶೀಲನೆಗೆ ವಹಿಸಬೇಕು ಎಂದು ಒತ್ತಾಯಿಸಿದ್ದವು. ರೈಲ್ವೆ ಪ್ರಯಾಣದಲ್ಲಿ ಹಿರಿಯ ನಾಗರಿಕರಿಗೆ ವಿನಾಯಿತಿ ನೀಡುವುದನ್ನು ಮುಂದುವರೆಸಬೇಕು ಎಂದೂ ಪ್ರತಿಪಕ್ಷಗಳು ಒತ್ತಾಯಿಸಿದ್ದವು.

## ಉಳವಯ್ಯ ಅವರಿಗೆ ರಂಭಾಪುರಿ ಜಗದ್ಗುರುಗಳಿಂದ ಆಶೀರ್ವಾದ



ದಾವಣಗೆರೆ, ಡಿ. 11- ಕಾರ್ಯಕ್ರಮ ವೊಂದರಲ್ಲಿ ಭಾಗ ವಹಿಸಲೆಂದು ಇಂದು ನಗರಕ್ಕಾಗಮಿಸಿದ್ದ ರಂಭಾಪುರಿ ಜಗದ್ಗುರುಗಳು, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಗೌರವಾಧ್ಯಕ್ಷರಾಗಿ ನೇಮಕಗೊಂಡಿರುವ ಎಸ್.ಜಿ. ಉಳವಯ್ಯ ಅವರನ್ನು ಶಾಲು ಹೊದಿಸಿ ಸನ್ಮಾನಿಸುವುದರ ಮೂಲಕ ಆಶೀರ್ವದಿಸಿದರು.


**Commercial Property for Rent**
2300 Sq.Ft. for Shops, Banks, Office
Old Hospital Road.
Contact :
Mob : 81399 99033

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 40x60 East, 40x60 North, 40x60, 40x60 South ಅಕ್ಕ-ಪಕ್ಕ, 80 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
Banking Sector Tele Caller
(Female Only)
Qualification : Any Degree
81508 12961
Interview Time : 11AM

**ಕಮರ್ಷಿಯಲ್ ಬಿಲ್ಡಿಂಗ್ ಬಾಡಿಗೆಗೆ/ಲೀಸ್‌ಗೆ ಇದೆ**
34x70 (2380 ಚದರಡಿ) ಅಳತೆಯ ಮೊದಲ ಹಾಗೂ ಎರಡನೇ ಮಹಡಿ ಬಾಡಿಗೆಗೆ /ಲೀಸ್‌ಗೆ ಇದೆ.
ವಿಳಾಸ: ಹೋಟೆಲ್ ಸಾಯಿ ಇಂಟರ್ ನ್ಯಾಷನಲ್ ಹಿಂಭಾಗ, ಬಸವೇಶ್ವರ ನಗರ, ಹಳೇ ಪಿ.ಬಿ. ರಸ್ತೆ, ದಾವಣಗೆರೆ.
ಸಂಪರ್ಕಿಸಿ : 94493 35577

**ಬೇಕಾಗಿದ್ದಾರೆ**
ಆಫೀಸ್ ಬಾಯ್ಸ್ (ಹುಡುಗರು) Marketing staff ಕೆಲಸಕ್ಕೆ ಬೇಕಾಗಿದ್ದಾರೆ.
ಸಮ್ಯಕ್ ಸೆರಾಮಿಕ್ಸ್
ಮೊ: 98450 81234

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮೆಕ್ಯಾನಿಕ್‌ಗಳು ಬೇಕಾಗಿದ್ದಾರೆ**
Tata Ace, Mahendra Jeetho, Bolaro Pickup, Cruser
ಈ ವಾಹನಗಳನ್ನು ರಿಪೇರಿ ಮಾಡಲು ನುರಿತ ಮೆಕ್ಯಾನಿಕ್‌ಗಳು ಬೇಕಾಗಿದ್ದಾರೆ. ಸೂತ್ತವಾದ ತಿಂಗಳ ಸಂಬಳ ಕೊಡಲಾಗುವುದು.
98804 96118
94484 23790

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ವಿಜನ್ ಇಂಟರ್ ನ್ಯಾಷನಲ್ ಎದುರುಗಡೆ 30x40, 30x40 East ಅಕ್ಕ-ಪಕ್ಕ, 60x40 East, Rate - 2500/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಅನುಭವವುಳ್ಳ ಸೇಲ್ಸ್ ಮನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್,
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ

**ಬೇಕಾಗಿದ್ದಾರೆ**
ಯಾವುದೇ ಪದವಿ ಪಡೆದ ಅನುಭವಿ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ.
ವಿ.ಎಸ್. ಎಂಟರ್‌ಪ್ರೈಸಸ್
ಮೊ: 9449335577

**ಸೈಟು ಮಾರಾಟಕ್ಕಿದೆ**
ಎಂ.ಸಿ.ಸಿ. ಬಿ ಬ್ಲಾಕ್ ನ ಹಾರ್ಟ್ ಹಾಸ್ಪಿಟಲ್ ರಸ್ತೆಗೆ ಪೂರ್ವಮುಖವಾಗಿ 47x60 ಅಡಿ ಅಳತೆ ಇದ್ದು, ಸೊತ್ತಿನ ದಾಖಲೆಯಲ್ಲಿ ಕಡಿಮೆ ಇರುತ್ತದೆ. ದಾಖಲೆಯಲ್ಲಿ ತೋರಿಸಿದ ಅಳತೆಗೆ ವ್ಯಾಪಾರಕ್ಕೆ ಕೊಡಲಾಗುತ್ತದೆ.
Mohan Real Estate Agencies
9742434049

**ಮಳಿಗೆ ಬಾಡಿಗೆಗೆ ಇದೆ**
ಗಡಿಯಾರ ಕಂಬದ ಎದುರು ವಸಂತ ಟಾಕೀಸ್ ರಸ್ತೆಯ ಕಾರ್ನರ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 1 ಹಾಗೂ ಫಸ್ಟ್ ಫ್ಲೋರ್‌ನಲ್ಲಿ 3, ಸೆಕೆಂಡ್ ಫ್ಲೋರ್‌ನಲ್ಲಿ 3 ಮಳಿಗೆ ಹಾಗೂ ಥರ್ಡ್ ಫ್ಲೋರ್‌ನಲ್ಲಿ 3 ರೂಂ ಬಾಡಿಗೆಗೆ ಇವೆ. ಮಳಿಗೆ ಅಳತೆ : 10x21
98444 76185
98445 00114

**ಉಚಿತ ಕಂಪ್ಯೂಟರ್ ಕೋರ್ಸ್**
ಕಂಪ್ಯೂಟರ್ ಬೇಸಿಕ್ ಕೋರ್ಸ್ ಅನ್ನು ಉಚಿತವಾಗಿ ಕಲಿಯಿರಿ ಹಾಗೂ MS Office, Typing Q, Tally Prime ಕೋರ್ಸ್‌ಗಳನ್ನು ಕೈಗೆಟುಕುವ ದರದಲ್ಲಿ ಕಲಿಯಿರಿ. Limited Seats Only.
Radar Computer Center
PJ Extn., Near Byadagi Shetru School.
81235 13157, 91108 97420

**HOUSE FOR RENT**
1 BHK, 2 BHK,
Siddaveerappa Layout, MCC B Block, Vidyanagara S.S. Layout A & B Block,
(Flats for Available for Rent)
96061 26471
Dakshith Iynahalli

**WANTED**
ಮನೆಯಲ್ಲಿ ಸಸ್ಯಹಾರಿ ಅಡುಗೆ ಮಾಡಲು ಅನುಭವವುಳ್ಳ ಅಡುಗೆ ಕೆಲಸದವರು ಬೇಕಾಗಿದ್ದಾರೆ. ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :
87622 21696

**3 BHK LUXURY FLATS FOR SALE**
Prime location on MBA College Road.
Amenities: 24/7 security, power backup, EV charging, and car parking.
Bookings Open Contact :
96864 62502

**2BHK ಮನೆ ಬಾಡಿಗೆಗೆ**
ದಾವಣಗೆರೆ ಎಸ್.ಎಸ್. ಲೇಔಟ್ 'ಎ' ಬ್ಲಾಕ್, 8ನೇ ಕ್ರಾಸ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 2 BHK ಮನೆ ಬಾಡಿಗೆಗೆ ಇದೆ. ಬೋರ್ ಮತ್ತು ನಲ್ಲಿ ನೀರಿನ ವ್ಯವಸ್ಥೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
95907 21624, 78922 68073

**ಜಮೀನು ಮಾರಾಟಕ್ಕಿದೆ**
ಆಲೂರು ಹತ್ತಿರ, ದಾವಣಗೆರೆ ತಾಲ್ಲೂಕು, ಪಣಿಯಾಪುರದಲ್ಲಿರುವ 3 ಎಕರೆ ಜಮೀನು ಮಾರಾಟಕ್ಕಿದೆ.
76762 79944
91645 05653

**ಬೇಕಾಗಿದ್ದಾರೆ**
ಸಿಲಿಂಡರ್ ಸಪ್ಲೈ ಮಾಡಲು ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ.
(ಇಂಡೇನ್, ಹೆಚ್.ಪಿ., ಭಾರತ್ ಏಜೆನ್ಸಿಯಲ್ಲಿ ಅನುಭವವಿರುವವರಿಗೆ ಆದ್ಯತೆ)
ಶಂಕರಲೀಲಾ ಗ್ಯಾಸ್ ಏಜೆನ್ಸಿ,
ದಾವಣಗೆರೆ.
ಮುಕ್ತವಾಗಿ ಕಚೇರಿಗೆ ಭೇಟಿ ನೀಡಿ

**2 BHK ಮನೆ ಬಾಡಿಗೆಗಿದೆ**
# 2923/530, 3ನೇ ಮೇನ್, 3ನೇ ಕ್ರಾಸ್, ನೇತಾಜಿ ಇನ್‌ಡೋರ್ ಸ್ಟೇಡಿಯಂ ಹಿಂಭಾಗ, SS ಲೇಔಟ್, 'ಬಿ' ಬ್ಲಾಕ್, ದಾವಣಗೆರೆ-4.
94484 90099

**ಡ್ರೈವರ್ ಬೇಕಾಗಿದ್ದಾರೆ**
ಕಾರ್/ಇನೋವಾದಲ್ಲಿ ಅನುಭವವಿರುವ, ಲೈಸನ್ಸ್ ಹೊಂದಿರುವವರು ಸಂಪರ್ಕಿಸಿ
ಬೆಳಗ್ಗೆ 11.30 ರಿಂದ 2.00ರವರೆಗೆ
08192 254736

**2BHK ಮನೆ ಲೀಸ್‌ಗಿದೆ**
1800 ಚ.ಅ., ಫುಲ್ ಫರ್ನಿಷ್ಡ್, ಸಿಸಿಟಿವಿ, ಭಗೀರಥ ಕಲ್ಯಾಣ ಮಂಟಪ ಹತ್ತಿರ, ಪಿ.ಬಿ. ರೋಡ್, ಹರಿಹರ.
90088 00080

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಮನೆ ಲೀಜ್‌ಗಿದೆ**
# 3100/51, ನೂತನ್ ಕಾಲೇಜ್ ರಸ್ತೆ, 7ನೇ ಮುಖ್ಯರಸ್ತೆ, 34ನೇ ವಾರ್ಡ್, 7ನೇ C ಶಿವಶಕ್ತಿ ಬ್ಲಾಕ್, ಅಳತೆ 30x50 ಅಡಿ, ವಿವೇಕಾನಂದ ಬಡಾವಣೆ, ದಾವಣಗೆರೆ ಉತ್ತರಾಭಿಮುಖ, 1ನೇ ಮಹಡಿ ಡಬಲ್ ಬೆಡ್ ರೂಂ, 2ನೇ ಮಹಡಿ, 3 ಬೆಡ್ ರೂಂ ಮನೆ ಮುನ್ಸಿಪಲ್/ಬೋರ್‌ವೆಲ್ ಇದೆ.
95387 32909, 98444 56243

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**Job Opportunities**
Required Plant Supervisor
(Male Only)
For Aradhya Chemicals & Fertilizers
(Preference BSc. Agri. Candidates Can apply)
73537 70016
email : acfdvg@gmail.com

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
ಕೆಲಸದ ಸಮಯ : ಬೆ.9 ರಿಂದ ಸಂ. 8ರವರೆಗೆ
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ಸ್
ಲಾಯರ್ ರಸ್ತೆ, ಟಯರ್ ಅಂಗಡಿಗಳ ಹತ್ತಿರ, ದಾವಣಗೆರೆ.

**ನೇರ ಪರೀಕ್ಷೆಗಳು**
SSLC, PUC, NTC, BA, B.COM, MA, M.COM, MBA, DIPLOMA, B.TECH.
CONTACT : SGET (R)
ಗಾಂಧಿ ಸರ್ಕಲ್, ಪಿ.ಬಿ ರೋಡ್, ಮೋತಿ ಸ್ವೀಟ್ಸ್, ಟ್ರೆಂಡ್ಸ್ ಪಕ್ಕ, ದಾವಣಗೆರೆ.
86602 35013

**WANTED**
Computer Operator and Helper male candidates Sales and Purchase
99009 71888
SAJJAN SUPERMART
HKR Circle Nittuvalli, Davanagere.

**ಹೊಸ ಕಮರ್ಷಿಯಲ್ ಬಿಲ್ಡಿಂಗ್ ಬಾಡಿಗೆಗೆ ಇದೆ**
ದಾವಣಗೆರೆ, ಹದಡಿ ರಸ್ತೆಯಲ್ಲಿ ಲಕ್ಷ್ಮೀವೆಂಕಟೇಶ್ವರ ಗ್ರಾನೈಟ್ಸ್ ಮತ್ತು ಮಾರ್ಬಲ್ಸ್ ಎದುರು, 2200 ಚ.ಅ. ಎಲ್ಲಾ ಸೌಲಭ್ಯವಿರುವ ಸೆಲ್ಲರ್ ಮಳಿಗೆ ಬಾಡಿಗೆಗೆ ಇದೆ.
94483 39406

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**ಮನೆ ಮಾರಾಟಕ್ಕಿದೆ**
ನಿಟುವಳ್ಳಿಯ ಚಿಕ್ಕನಹಳ್ಳಿ ಬಡಾವಣೆಯಲ್ಲಿ 15x40 2 ಬೆಡ್ ರೂಂ ಇರುವ ಆರ್.ಸಿ.ಸಿ. ಮನೆ ಮಾರಾಟಕ್ಕಿದೆ.
94486 55850

**ತುರ್ತಾಗಿ ಶಿಕ್ಷಕಿಯರು ಬೇಕಾಗಿದ್ದಾರೆ**
1) ಬಿಎ., ಬಿ.ಇಡಿ -02
2) ಬಿ.ಎಸ್ಸಿ., ಪಿಸಿಎಂ. ಅಥವಾ ಬಿ.ಎಸ್ಸಿ, ಬಿ.ಇಡಿ - 02,
3) ಡಿ.ಇಡಿ - 02
ಸಂಪರ್ಕಿಸಬೇಕಾದ ವಿಳಾಸ : ಜ್ಞಾನದೀಪ ಪಬ್ಲಿಕ್ ಸ್ಕೂಲ್, 60 ಅಡಿ ರಿಂಗ್ ರೋಡ್, ನಿಟ್ಟುವಳ್ಳಿ, ದಾವಣಗೆರೆ - 577004.
ಗೌರವ ಕಾರ್ಯದರ್ಶಿಗಳು
94496 79349, 89710 18943

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯಪಾನ ಬಿಡಬೇಕೆ?**
ಉಬ್ಬಸ ರೋಗ, ಕಾಲು ನೋವು, ಅಲರ್ಜಿ, ಮಧುಮೇಹ, ವೈಟ್‌ಗೈನ್ ಮತ್ತು ವೈಟ್‌ಲಾಸ್, ಗ್ಯಾಸ್ಟ್ರಿಕ್ ಇತ್ಯಾದಿಗಳಿಗೆ ನಮ್ಮನ್ನು ಸಂಪರ್ಕಿಸಿ :
ಪ್ರತಿ ತಿಂಗಳು 12 & 13ರಂದು
ಶ್ರೀ ಲಾಡ್ಜ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಹತ್ತಿರ, ಪಿ.ಬಿ. ರಸ್ತೆ, ದಾವಣಗೆರೆ.
ಡಾ।। ಶರ್ಮ, ಸಮಯ : ಬೆ.10-ಮ.3ರವರೆಗೆ
98869 40831

**CHANGE OF NAME**
I LATHA M BARADUR R/o # 34, Kalyan Purna Grama, Shiggaon (tq) Haveri (Dt) 581202 Priviously VIJAYALAKSHMI ANGADI vide SSLC Markscard No : 270637 have changed my name as LATHA M BARADUR after my marraige vide affidavit dated 9.12.2024 Hence forth all my dealings and transactions will be in my new name LATHA M BARADUR

**WANTED**
BHARAT PE COMPANY
Qulification : Not Requird
Male-15 Age 18 to 48
Designation - FSE
Location : Davangere, Jagalur, Honnali, Channagiri, Nyamathi, Shivamogga, Haveri
81057 38900

**COMPUTER OPERATOR REQUIRED FOR OFFICE WORK**
Tally prime, MS office, Kannada typing
94496 43555

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
94484 39639

**ಉಚಿತ ಕಣ್ಣಿನ ತಪಾಸಣೆ**
ಯಶಸ್ವಿನಿ, ESI, ಧರ್ಮಸ್ಥಳ ಸಂಘದ ಸಂಪೂರ್ಣ ಸುರಕ್ಷಾ ಯೋಜನೆ ಹೊಂದಿರುವವರಿಗೆ ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಲಾಗುವುದು.
ದಾವಣಗೆರೆ ನೇತ್ರಾಲಯ ಘಟಕವಾಗಿರುವ
ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆ,
ಎಂಸಿಸಿ ಎ ಬ್ಲಾಕ್, ಗುಂಡಿ ಛತ್ರ ಪಕ್ಕ, ದಾವಣಗೆರೆ.
83101 60893

# ಸ್ಲಂ ನಿವಾಸಿಗಳ ಬಗ್ಗೆ ನಿರ್ಲಕ್ಷ್ಯ ಖಂಡಿಸಿ ನಾಳೆ ಸ್ಲಂ ಜನಾಂದೋಲನ ಪ್ರತಿಭಟನೆ

ದಾವಣಗೆರೆ, ಡಿ. 11- ರಾಜ್ಯ ಸರ್ಕಾರದ ನಿರ್ಲಕ್ಷ್ಯೆ ಧೋರಣೆ ಖಂಡಿಸಿ ಸ್ಲಂ ಜನಾಂದೋಲನ ಕರ್ನಾಟಕ ಸಂಘಟನೆಯಿಂದ ನಾಡಿದ್ದು ದಿನಾಂಕ 13 ರ ಶುಕ್ರವಾರ ಬೆಳಗಾವಿ ಸುವರ್ಣ ಸೌಧದ ಮುಂಭಾಗ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನಾ ಜಿಲ್ಲಾ ಸಮಿತಿ ಗೌರವಾಧ್ಯಕ್ಷ ಎಸ್. ಎಲ್. ಆನಂದಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಸಂಘಟನೆ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದು, ಈಗಾಗಲೇ ಸ್ಲಂ ನಿವಾಸಿಗಳನ್ನು ಸರ್ಕಾರ ನಿರ್ಲಕ್ಷ್ಯೆ ಮಾಡುತ್ತಿರುವುದನ್ನು ಗಮನಿಸಿದ್ದೇವೆ. 2024-25 ನೇ ಸಾಲಿನ ಬಜೆಟ್‌ನಲ್ಲಿ ಕೇವಲ 30 ಕೋಟಿ ರೂ.ಗಳನ್ನು ಸ್ಲಂಗಳ ಅಭಿವೃದ್ಧಿಗೆ ನೀಡಿರುವುದು ನಗರ ವಂಚಿತ ಸಮುದಾಯಗಳನ್ನು ಅಪಮಾನಿಸಲಾಗಿದೆ ಎಂದರು.

ಸಾಮಾಜಿಕ ನ್ಯಾಯ ಸರ್ಕಾರದ ಪ್ರಮುಖ ಗುರಿಯಾಗಿದ್ದರೂ ಸಹ ಸ್ಲಂ ಜನರನ್ನು ಒಂದು ಸಮುದಾಯವಾಗಿ ಗುರುತಿಸುವಲ್ಲಿ ವಿಫಲವಾಗಿದೆ. ಇದರ ಜೊತೆಯಲ್ಲಿ ನಗರದ ಸ್ಲಂ ಜನರ ಕಷ್ಟದ, ಅನುಭವವಿಲ್ಲದ ವಸತಿ ಜಮೀರ್ ಅಹಮದ್ ಖಾನ್ ಮತ್ತು ವಸತಿ ಇಲಾಖೆ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ರಿಯಲ್ ಎಸ್ಟೇಟ್ ಉದ್ಯಮಿಗಳ ಮತ್ತು ಮೇಲ್ವರ್ಗಗಳ ಪರವಾದಂತಹ ನಿಲುವುಗಳನ್ನು ಹೊಂದಿದ್ದು, ಇದರಿಂದಾಗಿ ಸ್ಲಂಗಳ ಅಭಿವೃದ್ಧಿ ನೆಲಕಚ್ಚಿದೆ ಎಂದು ಹೇಳಿದರು.

ಖಾಸಗಿ ಮಾಲೀಕತ್ವದ 710 ಕ್ಕೂ ಹೆಚ್ಚು ಸ್ಲಂಗಳು ಘೋಷಣೆಯಾಗಿ 1.50 ಲಕ್ಷ ಕುಟುಂಬಗಳು ಜೀವನ ಸಾಗಿಸುತ್ತಿವೆ. ಇವುಗಳನ್ನು ಸಕ್ರಮಗೊಳಿಸಲು ಸರ್ಕಾರ ಬದ್ಧತೆ ಪ್ರದರ್ಶಿಸುವುದಿರಲಿ 1973 ರ ಸ್ಲಂ ಕಾಯಿದೆ ವಿರುದ್ಧವಾಗಿ ಕಳೆದ ಎರಡು ವರ್ಷಗಳಿಂದ ಖಾಸಗಿ ಸ್ಲಂಗಳನ್ನು ಘೋಷಿಸುವುದನ್ನೇ ನಿಲ್ಲಿಸಲಾಗಿದೆ. ಈ ಬಗ್ಗೆ ಅನೇಕ ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 1.80.253 ಮನೆಗಳನ್ನು ವಿವಿಧ ನಗರ, ಪಟ್ಟಣಗಳಲ್ಲಿ ನಿರ್ಮಿಸಲಾಗುತ್ತಿದ್ದು, ಇದುವರೆಗೂ ಅಂದಾಜು 60.789 ಮನೆಗಳನ್ನು ಪೂರ್ಣಗೊಳಿಸಿ ಹಸ್ತಾಂತರ ಮಾಡಿರುವುದನ್ನು ಹೊರತುಪಡಿಸಿದರೆ ಉಳಿದ 1.20.000 ಕುಟುಂಬಗಳು ಅತಂತ್ರವಾಗಿವೆ ಎಂದರು.

ಸ್ಲಂ ಜನರಿಗೆ ಹಕ್ಕುಪತ್ರ, ನೋಂದಣಿ, ಇ-ಖಾತಾ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕು. ಖಾಸಗಿ ಸ್ಲಂಗಳ ಘೋಷಣೆಗೆ ತೊಡಕಾಗಿರುವ ವಸತಿ ಇಲಾಖೆ ಸುತ್ತೋಲೆಯನ್ನು ಹಿಂಪಡೆಯಬೇಕು. 2025-26 ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಸ್ಲಂ ನಿವಾಸಿಗಳ ಜನಸಂಖ್ಯೆಗೆ ಅನುಗುಣವಾಗಿ ಕೊಳಚೆ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ 500 ಕೋಟಿ ರೂ. ಅನುದಾನವನ್ನು ಮೀಸಲಿಡಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೇಣುಕಾ ಯಲ್ಲಮ್ಮ, ಪರ್ವಿನ್ ಬಾನು, ಅಕ್ಕಿ ರಾಮಚಂದ್ರಪ್ಪ, ಮಂಜುಳ, ಬಾಲಪ್ಪ, ಜಂಶಿದಬಾನು ಉಪಸ್ಥಿತರಿದ್ದರು.

## ಮಲೇಬೆನ್ನೂರು ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆ

ಇಲ್ಲಿನ ಪುರಸಭೆಯ ಅಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆ ನಡೆಸಲಾಗುವುದು ಎಂದು ತಹಶೀಲ್ದಾರ್ ಗುರುಬಸವರಾಜ್ ತಿಳಿಸಿದ್ದಾರೆ. ಮಲೇಬೆನ್ನೂರು ಪುರಸಭೆಯ 10ನೇ ಅವಧಿಗೆ ಅಧ್ಯಕ್ಷ ಸ್ಥಾನ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದ್ದು, ಜೆಡಿಎಸ್ ಸದಸ್ಯ ಟಿ. ಹನುಮಂತಪ್ಪ ಅವರು ಅವಿರೋಧವಾಗಿ ಆಯ್ಕೆಯಾಗುವುದು ಬಹುತೇಕ ಖಚಿತ ಎನ್ನಲಾಗಿದೆ. ಇಲ್ಲಿ ಕಾಂಗ್ರೆಸ್ ಬಹುಮತ ಹೊಂದಿದ್ದರೂ ಎಸ್ಟಿ ಮೀಸಲಾತಿಯ ಸದಸ್ಯರಿಲ್ಲದ ಕಾರಣ

3 ಜನ ಸದಸ್ಯರನ್ನು ಹೊಂದಿದ ಜೆಡಿಎಸ್‌ಗೆ ಬಹಳ ಸುಲಭವಾಗಿ ಅಧಿಕಾರ ಸಿಗುವ ಸಾಧ್ಯತೆ ಇದೆ. ಒಂದು ವೇಳೆ ಕಾಂಗ್ರೆಸ್ ಸದಸ್ಯರು ಚುನಾವಣಾ ಸಭೆಗೆ ಗೈರು ಹಾಜರಾದರೆ ಕೋರಂ ಕೊರತೆಯಿಂದ ಚುನಾವಣೆಯನ್ನು ಮುಂದೂಡಿದರೂ ಆಶ್ಚರ್ಯ ಪಡಬೇಕಾಗಿಲ್ಲ ಎಂಬ ಮಾಹಿತಿ ಬಲ್ಲ ಮೂಲಗಳಿಂದ ತಿಳಿದು ಬಂದಿದೆ.

ಅಲ್ಲದೇ ಮೀಸಲಾತಿ ಬದಲಾವಣೆ ಕೋರಿ ಸದಸ್ಯರೊಬ್ಬರು ಕೋರ್ಟ್ ಮೆಟ್ಟಿಲೇರಿದ್ದು, ಅದರ ಆದೇಶದ ನಿರೀಕ್ಷೆ ಕೂಡ ಇದೆ.

## ನಾಳೆ ನಾಮದೇವ ಸಿಂಪಿ ಸಮಾಜದ ಕಾರ್ತಿಕೋತ್ಸವ

ದಾವಣಗೆರೆ, ಡಿ.11- ನಾಮದೇವ ಸಿಂಪಿ ಸಮಾಜದ ಎಸ್.ಕೆ.ಪಿ. ರಸ್ತೆಯ ಶ್ರೀ ವಿಠಲ ರುಕುಮಾಯಿ ಹರಿಮಂದಿರದಲ್ಲಿ (ಗಣೇಶ ದೇವಸ್ಥಾನದ ಪಕ್ಕ) ಇದೇ ದಿನಾಂಕ 14 ರಂದು ಶನಿವಾರ ಸಂಜೆ 7 ಕ್ಕೆ ಕಾರ್ತಿಕೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ. ನಾಮದೇವ ಸಿಂಪಿ ಸಮಾಜದವರು ಹಾಗೂ ಸಾರ್ವಜನಿಕರು ಈ ಕಾರ್ತಿಕೋತ್ಸವಕ್ಕೆ ಭಾಗವಹಿಸುವಂತೆ ಸಮಾಜದ ಅಧ್ಯಕ್ಷ ಎಂ.ಎಸ್. ವಿಠಲ್ ಹಾಗೂ ಪ್ರಧಾನ ಕಾರ್ಯದರ್ಶಿ ಮನೋಹರ ಎ. ಬೊಂಗಾಳೆ ತಿಳಿಸಿದ್ದಾರೆ.

# ಗ್ರಾಮೀಣ ಪ್ರದೇಶಕ್ಕೂ ಇ-ಟೆಂಡರ್ ಖರೀದಿ ವ್ಯವಸ್ಥೆ ವಿಸ್ತರಿಸಲು ರೈತ ಒಕ್ಕೂಟದ ಆಗ್ರಹ



ದಾವಣಗೆರೆ, ಡಿ.11- ಇ-ಟೆಂಡರ್ ಖರೀದಿ ವ್ಯವಸ್ಥೆಯನ್ನು ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಬೇಕೆಂದು ಆಗ್ರಹಿಸಿ ರೈತರ ಒಕ್ಕೂಟವು ಎಪಿಎಂಸಿ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿದೆ.

ನಮ್ಮ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಎಪಿಎಂಸಿ ಪ್ರಾಂಗಣದಲ್ಲಿ ಮಾತ್ರ ಇ-ಟೆಂಡರ್ ಪದ್ಧತಿಯಲ್ಲಿ ಖರೀದಿ ವಹಿವಾಟು ಜಾರಿಗೊಳಿಸಿರುವುದಕ್ಕೆ ಸಮಸ್ತ ರೈತರು ಹರ್ಷ ವ್ಯಕ್ತಪಡಿಸಿದ್ದಾರೆ.

ಇ-ಟೆಂಡರ್ ಜಾರಿಯಿಂದ ಧಾರಣೆಯಲ್ಲಿ ಏರಿಕೆ ಕಂಡಿದೆ. ಆದರೆ ಹಳ್ಳಿಗಳಲ್ಲಿ ಕೊಯ್ಲು ಮಾಡಿ, ರಾಶಿ ಮಾಡಿರುವ ಧಾನ್ಯವನ್ನು ನೇರ ಖರೀದಿ ಮಾಡಲಾಗುತ್ತಿದೆ. ಇದರಿಂದ ಹಳ್ಳಿಗಳಲ್ಲಿ ಖರೀದಿಸುವ ಧಾನ್ಯಗಳ ಬೆಲೆ ಏರಿಕೆ ಆಗುತ್ತಿಲ್ಲ. ಹಾಗಾಗಿ ಗ್ರಾಮೀಣ ಭಾಗದಲ್ಲೂ ಈ ವ್ಯವಸ್ಥೆ ಜಾರಿಗೊಳಿಸಬೇಕೆಂದರು.

ಈ ಇ-ಟೆಂಡರ್ ಖರೀದಿ ವಹಿವಾಟು ಪದ್ಧತಿಯನ್ನು ಗ್ರಾಮೀಣ ಪ್ರದೇಶದಲ್ಲಿನ ಕಣಗಳಲ್ಲಿ ಅಥವಾ ಕಾಂಕ್ರೀಟ್ ರಸ್ತೆಗಳಲ್ಲಿ ರಾಶಿ ಹಾಕಿ ಸಂಗ್ರಹಿಸಿರುವ ಧಾನ್ಯಗಳಿಗೂ ವಿಸ್ತರಿಸಬೇಕು. ಆಗ ಹಳ್ಳಿಗಳಲ್ಲಿ ಮಾರಾಟ ಮಾಡುವ ಧಾರಣೆಯೂ ಏರಿಕೆ ಆಗುತ್ತದೆ ಎಂದಿದ್ದಾರೆ.

ವೇಮೆಂಟ್-ಪೇಮೆಂಟ್ ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಪೇಮೆಂಟ್ ವಿಳಂಬ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ವೇಮೆಂಟ್ ಸ್ಲಿಪ್‌ನಲ್ಲಿ ಖರೀದಿದಾರರ ಹೆಸರು ಮಾತ್ರ ನಮೂದಿಸಲಾಗುತ್ತಿದ್ದು, ಇದರಲ್ಲಿ ರೈತನ ಹೆಸರು ಮತ್ತು ಊರನ್ನು ಕಡ್ಡಾಯವಾಗಿ ನಮೂದಿಸಬೇಕು ಮತ್ತು ಖರೀದಿಸಿದ ಬೆಲೆಯನ್ನೂ ನಮೂದಿಸಬೇಕು ಎಂದು ಹೇಳಿದ್ದಾರೆ.

ಶ್ಯೂಟ್ ಹಾಗೂ ಡಿಸ್ಕೌಂಟ್ ಪದ್ಧತಿಯನ್ನು ನಿಷೇಧಿಸಬೇಕು. ಶ್ಯೂಟ್ ಪಡೆದವರನ್ನು ಮತ್ತು ಡಿಸ್ಕೌಂಟ್ ಕೇಳಿದವರನ್ನು ತಕ್ಷಣವೇ ಬಂಧಿಸುವ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಹಮಾಲರ ಕೂಲಿಯನ್ನು ಸಂಪೂರ್ಣವಾಗಿ ಖರೀದಿದಾರರೇ ಭರಿಸಬೇಕು. ಹಮಾಲರು ಸ್ಯಾಂಪಲ್ ಪಡೆಯುವುದನ್ನು ನಿಷೇಧಿಸಬೇಕು ಎಂಬುದು ರೈತ ಒಕ್ಕೂಟದ ಬೇಡಿಕೆಯಾಗಿದೆ.

ಈ ವೇಳೆ ರೈತ ಮುಖಂಡರಾದ ಕೊಳೇನಹಳ್ಳಿ ಬಿ.ಎಂ. ಸತೀಶ್, ಬೆಳವನೂರು ನಾಗೇಶ್ವರರಾವ್, ಲೋಕಿಕೆರೆ ನಾಗರಾಜ್, ವಿಜಯಲಕ್ಷ್ಮಿ ಮಾಚಿನೇನಿ, ಎ.ವೈ. ಪ್ರಕಾಶ್, ಧನಂಜಯ ಕಡ್ಲೆಬಾಳ್, ಗೋಣಿವಾಡ ಮಂಜುನಾಥ, ರುದ್ರಕಟ್ಟೆ ಪರಮೇಶ್ವರಪ್ಪ, ಆರುಂಡಿ ಪುನೀತ್, ಮಾಜಿ ಮೇಯರ್ ವಸಂತಕುಮಾರ್, ಅಣಬೇರು ಕುಮಾರಸ್ವಾಮಿ, ಶಿವಪ್ರಕಾಶ್, ಗೋಪನಾಳ್ ಪಾಲಾಕ್ಷಪ್ಪ, ವಡ್ಡಿನಳ್ಳಿ ಸಿದ್ದೇಶ್, ಆರನೇ ಕಲ್ಲು ವಿಜಯಕುಮಾರ್, ಕಾಶಿಪುರ ಸುರೇಶ್, ಕುರ್ಕಿ ರೇವಣಸಿದ್ದಪ್ಪ, ಐಗೂರು ತಿಪ್ಪೇಸ್ವಾಮಿ ಇತರರಿದ್ದರು.

## ನಗರದಲ್ಲಿ ಸಿಂಗಲ್ಸ್ - ಡಬಲ್ಸ್ ಪಂದ್ಯಗಳ ಉದ್ಘಾಟನೆ



ದಾವಣಗೆರೆ, ಡಿ. 11- ದಾವಣಗೆರೆ ಟೆನ್ನಿಸ್ ಸಂಸ್ಥೆ ವತಿಯಿಂದ ನಡೆಸುವ 10,12.14,16ವರ್ಷಗಳ ಒಳಗಿನ ಗಂಡು ಮತ್ತು ಹೆಣ್ಣು ಮಕ್ಕಳ ಸಿಂಗಲ್ಸ್ ಮತ್ತು ಡಬಲ್ಸ್ ಪಂದ್ಯಗಳನ್ನು ಅಧ್ಯಕ್ಷ ಡಾ. ಬ್ಯಾಡಗಿ ಉದ್ಘಾಟಿಸಿದರು.

ಒಟ್ಟು 110 ಸ್ಪರ್ಧಿಗಳು ಭಾಗವಹಿಸಿದ್ದು, ನಗರ ಸೇರಿದಂತೆ ರಾಜ್ಯದ ಬೆಳಗಾವಿ, ವಿಜಾಪುರ, ಚಿತ್ರದುರ್ಗ, ಶಿವಮೊಗ್ಗ, ಮಂಡ್ಯ, ಮೈಸೂರು ಅಲ್ಲದೇ ಗೋವಾ ಮತ್ತು ಡೆಲ್ಲಿಯ ಮಕ್ಕಳೂ ಭಾಗವಹಿಸಿರುವುದು ಈ ಬಾರಿಯ ವಿಶೇಷವಾಗಿದೆ.

ಭಾರತೀಯ ಮೂಲದ ಆಸ್ಟ್ರೇಲಿಯಾ ವಾಸಿ ಭಾಗವಹಿಸಿರುವುದು ಅತಿ ವಿಶೇಷ ಆಗಿದೆ. ದಾವಣಗೆರೆಯ ಕನಿಷ್ಕ ಮತ್ತು ಶಿವಮೊಗ್ಗದ ನಿಧೀಶ್ ಈಗಾಗಲೇ 8 ರ ಹಂತಕ್ಕೆ ತಲುಪಿದ್ದು, ಉಳಿದ ಪಂದ್ಯಗಳು ಇನ್ನೂ ನಡೆಯುತ್ತಿವೆ.

ಸಂಸ್ಥೆಯ ಮಾಜಿ ಕಾರ್ಯದರ್ಶಿ ಕೆ.ಪಿ. ಚಂದ್ರಪ್ಪ ಉದ್ಘಾಟನೆಯಲ್ಲಿ ಭಾಗವಹಿಸಿ ಕ್ರೀಡಾ ಪಟುಗಳಿಗೆ ಶುಭ ಹಾರೈಸಿದರು. ಸಂಸ್ಥೆಯ ನಿರ್ದೇಶಕರುಗಳು ದಾವಣಗೆರೆಯ ಟೆನ್ನಿಸ್ ಆಟಗಾರರು ಮತ್ತು ಕ್ರೀಡಾಭಿಮಾನಿಗಳು ಹಾಜರಿದ್ದು ಪಂದ್ಯಾವಳಿಗೆ ಶುಭ ಕೋರಿರುತ್ತಾರೆ.

# ನಗರದಲ್ಲಿ ನಾಳೆ 'ಸ್ವಪ್ನಾ ಬುಕ್ ಹೌಸ್' 23 ನೇ ಶಾಖೆ ಉದ್ಘಾಟನೆ

ದಾವಣಗೆರೆ, ಡಿ. 11- ಭಾರತದ ಅತಿ ದೊಡ್ಡ ಪುಸ್ತಕ ಭಂಡಾರ 'ಸ್ವಪ್ನಾ ಬುಕ್ ಹೌಸ್' ಇದರ 23 ನೇ ನೂತನ ಶಾಖೆ ಇದೇ ದಿನಾಂಕ 13 ರಂದು ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಗರದ ಎವಿಕೆ ಕಾಲೇಜು ರಸ್ತೆಯಲ್ಲಿ ಉದ್ಘಾಟನೆಗೊಳ್ಳಲಿದೆ ಎಂದು ಸ್ವಪ್ನಾ ಬುಕ್ ಹೌಸ್ ಮಾಲೀಕರೂ ಆದ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾಧಿಕಾರಿ ಜಿ.ಎನ್. ಗಂಗಾಧರಸ್ವಾಮಿ ಶಾಖೆಯನ್ನು ಉದ್ಘಾಟಿಸಿದ ನಂತರ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಗುರುಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ನಾಡೋಜ ಪ್ರೊ. ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸುವರು. ಎಸ್ಪಿ ಉಮಾ ಪ್ರಶಾಂತ್ ದೀಪಾರಾಧನೆ ಮಾಡುವರು. ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮತ್ತಿತರರು ಭಾಗವಹಿಸಲಿದ್ದಾರೆಂದು ಮಾಹಿತಿ ನೀಡಿದರು.

ಇದೇ ವೇಳೆ ಬಸವ ಕಲಾ ಲೋಕದ ಅರುಣ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಸ್ವಪ್ನಾ ಬುಕ್ ಹೌಸ್ ಮಾಲೀಕರಾದ ನಿತಿನ್ ಷಾ ಮಾತನಾಡಿ, ಸ್ವಪ್ನಾ ಬುಕ್ ಹೌಸ್ ಜ್ಞಾನ ಪೀಠ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ಸೇರಿದಂತೆ 500 ಕ್ಕೂ ಹೆಚ್ಚು ಬರಹಗಾರರ 7000 ಕ್ಕೂ ಅಧಿಕ ಪುಸ್ತಕಗಳನ್ನು ಪ್ರಕಟಿಸಿದೆ. ರಾಜ್ಯದ ವಿವಿಧ ಭಾಗಗಳಲ್ಲಿ 22 ಶಾಖೆಗಳನ್ನು ಹೊಂದಿದೆ. ಭಾರತದ ದೊಡ್ಡ ಪುಸ್ತಕ ಮಳಿಗೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ ಎಂದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಸಾಹಿತ್ಯ ಕ್ಷೇತ್ರದಲ್ಲಿ ಪುಸ್ತಕ ಸಂಸ್ಕೃತಿ ಬೆಳೆಸುವಲ್ಲಿ ಸ್ವಪ್ನ ಬುಕ್ ಹೌಸ್ ಅಮೂಲ್ಯ ಕೊಡುಗೆ ನೀಡಿದೆ. ದಾವಣಗೆರೆ ನಗರಕ್ಕೆ ಬುಕ್ ಹೌಸ್ ಅಗತ್ಯವಿತ್ತು. ಸಾಹಿತ್ಯಾಸಕ್ತರಿಗೆ ಸಂತಸವಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸ್ವಪ್ನ ಬುಕ್ ಹೌಸ್ ಸಂಸ್ಥೆಯ ದೊಡ್ಡೇಗೌಡ, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಹಿರಿಯ ಪತ್ರಕರ್ತ ಬಾ.ಮ.ಬಸವರಾಜಯ್ಯ, ಗಂಗಾಧರಯ್ಯ ಹಿರೇಮಠ ಉಪಸ್ಥಿತರಿದ್ದರು.

## ಕಾಮಗಾರಿ ಪರಿಶೀಲಿಸಿದ ಮೇಯರ್



ದಾವಣಗೆರೆ, ಡಿ. 11- ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಆದೇಶದ ಮೇರೆಗೆ ನಿಟುವಳ್ಳಿ ಶಕ್ತಿ ನಗರ ಮುಖಾಂತರ ರೈಲ್ವೆ ಅಂಡರ್ ಪಾಸ್‌ನಿಂದ ಆವರಗೆರೆ ಪಿ.ಬಿ. ರಸ್ತೆಗೆ ಸಂಪರ್ಕಿಸುವ ರಸ್ತೆ ಕಾಮಗಾರಿ ಪ್ರಾರಂಭಿಸುವ ಸ್ಥಳ ಪರಿಶೀಲನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮೇಯರ್ ಚಮನ್ ಸಾಬ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಹುಲ್ಲುಮನಿ ಗಣೇಶ್, ಸಚಿವರ ಆಪ್ತ ಸಹಾಯಕ ನಾಗರಾಜ್, ಆಯುಕ್ತರಾದ ರೇಣುಕಾ, ಕಾಂಗ್ರೆಸ್ ಮುಖಂಡರಾದ ಹುಲ್ಮನೆ ಗಣೇಶ್, ಆವರಗೆರೆ ಕರಿಗೌಡ, ಇಟ್ಟಿಗುಡಿ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

## ಕೃಷ್ಣ ನಿಧನಕ್ಕೆ ಜಿಲ್ಲಾ ಕಸಾಪ ಸಂತಾಪ

ದಾವಣಗೆರೆ, ಡಿ.11- ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಧೀಮಂತ ರಾಜಕಾರಣಿ ಮುತ್ಸದ್ಧಿಗಳೂ, ಕರ್ನಾಟಕದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿ ಎಸ್.ಎಂ. ಕೃಷ್ಣ ನಿಧನರಾಗಿರುವುದನ್ನು ಕೇಳಿ ನಮಗೆ ಒಬ್ಬ ಉತ್ತಮ ಮಾರ್ಗದರ್ಶಕನನ್ನು ಕಳೆದುಕೊಂಡ ಅನಾಥ ಪ್ರಜ್ಞೆ ನಾಡಿನ ಜನತೆಗೆ ಕಾಡುತ್ತದೆ ಎಂದು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಮೃತರಿಗೆ ನುಡಿ ನಮನ ಸಲ್ಲಿಸಿದ್ದಾರೆ.

ಕನ್ನಡ ನಾಡು, ನುಡಿ, ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಹಿರಿಯ ಚೇತನರಾಗಿದ್ದ ಎಸ್.ಎಂ. ಕೃಷ್ಣ ಅವರ ಆತ್ಮಕ್ಕೆ ಚಿರಶಾಂತಿ ಬಯಸಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಪರವಾಗಿ ಹಾಗೂ ಎಲ್ಲಾ ಕನ್ನಡದ ಮನಸ್ಸುಗಳ ಪರವಾಗಿ ಸಮರ್ಪಿಸುತ್ತೇವೆ.

## ಎಸ್.ಎಂ. ಕೃಷ್ಣರ ಋಣ ತೀರಿಸದ ಐಟಿ-ಬಿಟಿ

**1ನೇ ಪುಟದಿಂದ** ಆದರೆ, ಬೆಳವಣಿಗೆ ಆಗಿರಲಿಲ್ಲ, ಕೃಷ್ಣ ಅವರು ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ಬೆಂಗಳೂರು ನಗರಕ್ಕೆ ಮೂಲಸೌಕರ್ಯ ಕಲ್ಪಿಸಿಕೊಡುವ ಜೊತೆಗೆ ಐಟಿ-ಬಿಟಿ ವಲಯಕ್ಕೆ ಉತ್ತೇಜನ ನೀಡಿದರು.

ಇಷ್ಟಾದರೂ ಬೆಂಗಳೂರಿನ ಐಟಿ-ಬಿಟಿ ವಲಯ ಕೃಷ್ಣ ಅವರ ಋಣ ತೀರಿಸಲು ಮುಂದಾಗಿಲ್ಲ.

# ಅವೈಜ್ಞಾನಿಕ ಸೇತುವೆಯಿಂದ ಅಪಘಾತಗಳು ಪರ್ಯಾಯ ವ್ಯವಸ್ಥೆಗೆ ಸಂಸದರಿಂದ ಒತ್ತಡ





ದಾವಣಗೆರೆ, ಡಿ. 11 - ಭೂಮಿಕ ನಗರದಿಂದ ರಾಮ ನಗರಕ್ಕೆ ಸಾಗುವ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ನಿರ್ಮಾಣಗೊಂಡಿರುವ ಕೆಳ ಸೇತುವೆಯಿಂದ ಹಲವಾರು ಅಪಘಾತಗಳಿಗೆ ಹಾಗೂ ಟ್ರಾಫಿಕ್ ಜಾಮ್‌ಗೆ ಎಡೆಮಾಡಿ ಕೊಟ್ಟಿರುತ್ತದೆ.

ಈ ಸೇತುವೆಯು ಕಿರಿದಾಗಿದ್ದು ರಾಜ್ಯ ಸಾರಿಗೆ ಸಂಸ್ಥೆಯ ಡಿಪೋ ಘಟಕಕ್ಕೆ ಹೋಗುವ ಭಾರೀ ವಾಹನಗಳು ಮತ್ತು ಆಸ್ಪತ್ರೆಯ ಆಂಬ್ಯುಲೆನ್ಸ್‌ಗಳು ಜತೆಯಲ್ಲಿ ಇತರೆ ಭಾರಿ ವಾಹನಗಳು ಸಾಗುತ್ತಿರುತ್ತವೆ. ಸೇತುವೆಯು 2x4x4.5 ಮೀ. ವಿಸ್ತಾರ ಹೊಂದಿದ್ದು ಹಲವಾರು ಅವಘಡಗಳಿಗೆ ಕಾರಣವಾಗಿದೆ.

ಇದರ ಬಗ್ಗೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಅವರು ಪೊಲೀಸ್ ಇಲಾಖೆ, ರಾಜ್ಯ ರಸ್ತೆ ನಿಗಮ, ಲೋಕೋಪಯೋಗಿ ಇಲಾಖೆ, ಇತರೆ ಇಲಾಖೆಗಳಿಂದ ಮಾಹಿತಿ ತರಿಸಿ ಇದರ ಬಗ್ಗೆ ಸಂಸತ್ತಿನಲ್ಲಿ ಸಂಸದರು ಪ್ರಶ್ನಿಸಿದ್ದು ಅತೀ ಶೀಘ್ರವೇ ಇದಕ್ಕೆ ಪರಿಹಾರವಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಡಲು ಒತ್ತಡ ಹೇರಿದರು.

## ಹರಿಹರ: ಕೃಷ್ಣ ನಿಧನಕ್ಕೆ ಹಾಲಿ, ಮಾಜಿ ಶಾಸಕರ ಶೋಕ

ಹರಿಹರ, ಡಿ.11- ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ನಿಧನಕ್ಕೆ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್ ಮತ್ತು ಎಸ್.ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಜಿ.ಬಿ. ಹಾಲೇಶ್ ಗೌಡ್ರು ಗುತ್ತೂರು, ಬಿ.ರೇವಣಸಿದ್ದಪ್ಪ, ಎಂ. ನಾಗೇಂದ್ರಪ್ಪ, ಕೃಷ್ಣ ಸಾ ಭೂತೆ, ಟಿ.ಜೆ. ಮುರುಗೇಶಪ್ಪ, ಸಿ.ಎನ್. ಹುಲುಗೇಶ್, ನಿಕಿಲ್ ಕೊಂಡಜ್ಜಿ, ಎಲ್.ಬಿ. ಹನುಮಂತಪ್ಪ, ದೊಸ್ತಾನ ಖಲೀಲ್ ಸಂತಾಪ ವ್ಯಕ್ತಪಡಿಸಿದ್ದಾರೆ.

ಅಲ್ಲದೇ ಬಿಜೆಪಿ ಮುಖಂಡ ಜಿಪಂ ಮಾಜಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಚಂದ್ರಶೇಖರ್ ಪೂಜಾರ್, ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಉಪಾಧ್ಯಕ್ಷ ಜಂಬಣ್ಣ ಗುತ್ತೂರು, ಸದಸ್ಯರಾದ ಶಂಕರ್ ಖಟಾವ್ಕರ್, ಎ. ವಾಮನಮೂರ್ತಿ, ಕೆ.ಜಿ.ಸಿದ್ದೇಶ್, ಪಿ.ಎನ್ ವಿರುಪಾಕ್ಷಪ್ಪ, ಎಸ್.ಎಂ. ವಸಂತ್, ರಜನಿಕಾಂತ್, ಸುಮಿತ್ರಮ್ಮ, ಪಕ್ಕೀರಮ್ಮ, ನಾಗರತ್ನ, ಡಿ.ರತ್ನ ಉಜ್ಜೇಶ್, ಉಷಾ ಮಂಜುನಾಥ್, ನಿಂಬಕ್ಕ ಚಂದಪೂರ್, ಹನುಮಂತಪ್ಪ, ವಿಜಯಕುಮಾರ್, ಅಶ್ವಿನಿ ಕೃಷ್ಣ, ದಿನೇಶ್ ಬಾಬು, ದಾದಾ ಖಲಂದರ್, ಲಕ್ಷ್ಮೀ ಮೋಹನ್, ನಾಮ ನಿರ್ದೇಶನ ಸದಸ್ಯ ಕೆ.ಬಿ. ರಾಜಶೇಖರ್, ಗಿರಿಯಮ್ಮ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಎಸ್.ಹೆಚ್. ಪ್ಯಾಟಿ, ಎಸ್.ಎಸ್.ಕೆ. ಸಮಾಜದ ರಾಜ್ಯ ಅಧ್ಯಕ್ಷ ಶಶಿಕುಮಾರ್ ಮೆಹರ್ವಾಡೆ ಸಂತಾಪ ಸೂಚಿಸಿದ್ದಾರೆ.

# 60 ಜನ ಕಲಾವಿದರ ಒಟ್ಟು ಕುಟುಂಬ ಬೀದಿಗೆ ತರಲು ಮುಂದಾದ ಪಾಲಿಕೆ ಅಧಿಕಾರಿಗಳು

### ಬಸಾಪುರ ಭಜನೆ ಕಲಾವಿದರು ಬೀದಿಗೆ : ಜಿಲ್ಲಾ ಸಚಿವರ ಮಾತಿಗೂ ಬೆಲೆ ಇಲ್ಲ





ದಾವಣಗೆರೆ, ಡಿ.11- ಪಾಲಿಕೆ ವ್ಯಾಪ್ತಿಯಲ್ಲಿ ಅದೆಷ್ಟೋ ಪಾರ್ಕ್, ರಸ್ತೆ, ಸರ್ಕಾರಿ ಜಾಗಗಳು ಅತಿಕ್ರಮಣ ಆಗಿವೆ. ಅವ್ಯಾವೂ ನಮ್ಮ ಪಾಲಿಕೆ ಅಧಿಕಾರಿಗಳ ಕಣ್ಣಿಗೆ ಕಂಡಿಲ್ಲ. ಸುಮಾರು 40 ವರ್ಷಗಳಿಂದ ಮನೆ ನಿರ್ಮಿಸಿಕೊಂಡು ವಾಸ ಮಾಡುತ್ತಿರುವ 60 ಜನ ಸದಸ್ಯರಿರುವ ಒಟ್ಟು ಕುಟುಂಬದ ಜಾಗ ದುರ್ಬೀನಿನ ಕಣ್ಣಿಗೆ ಬಿದ್ದ ಹಾಗೆ ನಮ್ಮ ಪಾಲಿಕೆ ಅಧಿಕಾರಿಗಳ ಕಣ್ಣಿಗೆ ಬಿದ್ದಿದೆ.

ರಾಜ್ಯದ ಮೂಲೆ ಮೂಲೆಯಲ್ಲಿ ಬಸವ ಚಿಂತನೆ ಬಿತ್ತುತ್ತಾ ಹೆಸರುವಾಸಿ ಆಗಿರುವ ಬಸಾಪುರದ ಭಜನಾ ಕಲಾವಿದರು ವಾಸ ಮಾಡುವ ಮನೆ ಈಗ ಪಾಲಿಕೆಯ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಿದೆ. ಕಳೆದ 15 ದಿನಗಳಲ್ಲಿ ಒಬ್ಬರಿಲ್ಲೊಬ್ಬ ಅಧಿಕಾರಿಗಳು ಮನೆ ಇರುವ ಜಾಗಕ್ಕೆ ಭೇಟಿ ನೀಡಿ ತರಹ ತರಹದ ಕಿರುಕುಳ ಕೊಡುತ್ತಲೇ ಇದ್ದಾರೆ. ವಾರದ ಹಿಂದೆ ಅದಾಗಲೇ ಮೂರು ಅಡಿ ಕಾಲು ದಾರಿ ಇದೆ ಎಂದು ತೆರವುಗೊಳಿಸಿದ್ದರು. ತೆರವಿನ ಬಳಿಕ ಬಿದ್ದು ಹೋಗಿದ್ದ ಗೋಡೆಗಳನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮನೆ ಪುನರ್ ನಿರ್ಮಾಣ ಮಾಡಿಕೊಂಡ ಕಲಾವಿದರು ನೆಮ್ಮದಿಯಿಂದ ಇದ್ದರು. ಆದರೆ, ಇಂದು ಮತ್ತೆ ಪಾಲಿಕೆ ಇಂಜಿನಿಯರ್ ಭೇಟಿ ನೀಡಿ, ಪೂರ್ಣ ಮನೆ ಕೆಡವಿ, ಬೇರೆ ಕಡೆ ಜಾಗ ಕೊಡುತ್ತೇವೆ, ಅಲ್ಲಿ ನಿರ್ಮಿಸಿಕೊಳ್ಳಿ ಎಂದು ತಿಳಿಸಿದ್ದಾರಂತೆ.

15 ದಿನಗಳ ಹಿಂದೆ ಬಂದಿದ್ದ ಅಧಿಕಾರಿಗಳ ತಂಡ ಸಮೀಕ್ಷೆ ನಡೆಸಿ, ಮೂರು ಅಡಿ ದಾರಿ ಒತ್ತುವರಿ ಆಗಿದೆ ಎಂದಾಗ ಬಸವ ಕಲಾ ಲೋಕದ ಬಡ ಕಲಾವಿದರು ನಾಲ್ಕು ಅಡಿ ತೆರವು ಮಾಡಿಕೊಟ್ಟು ಮನೆ ನಿರ್ಮಿಸಿಕೊಂಡರು. ಅಲ್ಲಿಗೆ ಸಮಸ್ಯೆ ಬಗೆಹರಿಯಿತು ಎಂದು ನಿಟ್ಟುಸಿರು ಬಿಟ್ಟರು. ಆದರೆ, ಈಗ ಮತ್ತೆ ದಿಢೀರ್ ಪ್ರತ್ಯಕ್ಷ ಆಗಿರುವ ಪಾಲಿಕೆ ಇಂಜಿನಿಯರ್‌ಗಳು ನೀವು ಸಂಪೂರ್ಣ ಮನೆ ಖಾಲಿ ಮಾಡಿ ಬೇರೆ ಕಡೆ ಜಾಗ ಕೊಡುತ್ತೇವೆ ಎನ್ನುತ್ತಿದ್ದಾರೆ.

ಹಸುಗೂಸು, ವಯೋವೃದ್ಧರು, ವಯಸ್ಸಿಗೆ ಬಂದ ಮಕ್ಕಳ ತುಂಬು ಕುಟುಂಬದ ಪರಿಸ್ಥಿತಿಯನ್ನೂ ಅರಿಯದ ನಿರ್ದಯಿ ಪಾಲಿಕೆ ಅಧಿಕಾರಿಗಳು ಏಕಾಏಕಿ ಕುಟುಂಬವನ್ನು ಮನೆಯಿಂದ ಹೊರಹಾಕಿ, ಜಾಗ ಕೊಟ್ಟರೆ ಅವರು ಬದುಕುವುದಾದರೂ ಹೇಗೆ ಎಂಬುದನ್ನೂ ಸಹ ಆಲೋಚಿಸದೆ ಇರುವುದು ಇವರ ಜನಪರ ಕಾಳಜಿಗೆ ಹಿಡಿದ ಕೈಗನ್ನಡಿ ಆಗಿದೆ.

## ಕೃಷ್ಣ ನಿಧನಕ್ಕೆ ಜೆ. ಸೋಮನಾಥ್ ಸಂತಾಪ

ದಾವಣಗೆರೆ, ಡಿ.11- ದೇಶದ ರಾಜಕಾರಣದಲ್ಲಿ ಅಪ್ರತಿಮ ಸೇವೆ ಸಲ್ಲಿಸಿ, ಅಜಾತಶತ್ರು ಎನಿಸಿಕೊಂಡಿದ್ದ ಎಸ್.ಎಂ. ಕೃಷ್ಣ ಅವರ ಅಗಲಿಕೆಯು ರಾಜ್ಯಕ್ಕೂ, ದೇಶಕ್ಕೂ ತುಂಬಲಾರದ ನಷ್ಟವಾಗಿದೆ ಎಂದು ವೀರಶೈವ ಸಮಾಜದ ಮುಖಂಡ ಜೆ. ಸೋಮನಾಥ್ ಸಂತಾಪ ವ್ಯಕ್ತಪಡಿಸಿದ್ದಾರೆ.

## ತುಳಜಾಭವಾನಿ ದೇವಸ್ಥಾನದಲ್ಲಿ ಕಾರ್ತಿಕ

ದಾವಣಗೆರೆ, ಡಿ. 11- ಇಲ್ಲಿನ ಕೆಟಿಜೆ ನಗರ 3ನೇ ಮುಖ್ಯರಸ್ತೆ, 11 ಮತ್ತು 12ನೇ ಕ್ರಾಸ್‌ನಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ಶ್ರೀ ತುಳಜಾ ಭವಾನಿ ಕಾರ್ತಿಕೋತ್ಸವವು ಇದೇ ದಿನಾಂಕ 20ರಂದು ನಡೆಯಲಿದೆ.

## ಮಾನ್ಯ ಉಪ-ವಿಭಾಗಾಧಿಕಾರಿಗಳು, ಹರಪನಹಳ್ಳಿ ಇವರ ನ್ಯಾಯಾಲಯದಲ್ಲಿ

**ಆರ್.ಎ.ನಂ. 233/2024-25**

ಅಪೀಲುದಾರರು : ಶ್ರೀಮತಿ ಪ್ರೀತಿ ಬಕ್ಕೇಶ್ - ವಿರುದ್ಧ -

ಎದುರುದಾರರು : ಮಾನ್ಯ ತಹಶೀಲ್ದಾರ್‌ರವರು, ಹರಪನಹಳ್ಳಿ ಹಾಗೂ ಇತರರು

ಎದುರುದಾರರು / ನೋಟಿಸ್‌ದಾರರು 2) ಶ್ರೀಮತಿ ಸುಜಾತ ಕೋಂ ಲೇಟ್ ಶಿವಪ್ಪ ಎ., ವಯಸ್ಸು ಸುಮಾರು 54 ವರ್ಷ, ವಾಸ : # 895/3, ಬಸವನಗೌಡ ಲೇಔಟ್, ಬೆಳ್ಳೂಡಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ

3) ಎ.ಎಸ್. ಹನುಮೇಶ್ ಬಿನ್ ಶಿವಪ್ಪ ವಯಸ್ಸು ಸುಮಾರು 28 ವರ್ಷ, ವಾಸ : # ನಂ.168, ಬಸವನಗೌಡ ಲೇಔಟ್, ಬೆಳ್ಳೂಡಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ

4) ರೇಖಾ.ಎ.ಎಸ್. ಬಿನ್ ಲೇಟ್ ಶಿವಪ್ಪ ಎ., ವಯಸ್ಸು ಸುಮಾರು 20 ವರ್ಷ, ವಾಸ : ಡೋರ್ ನಂ.895/3, ಬಸವನಗೌಡ ಲೇ ಔಟ್, ಬೆಳ್ಳೂಡಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ

**ಸಿ.ಪಿ.ಸಿ ಆದೇಶ 5 ನಿಯಮ 20 ರ ಅಡಿಯಲ್ಲಿ 2 ರಿಂದ 4ನೇ ಎದುರುದಾರರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸು**

ಮೇಲ್ಕಂಡ ಅಪೀಲನ್ನು ಅಪೀಲುದಾರರು 1ನೇ ಎದುರುದಾರರು 2 ರಿಂದ 4 ರವರೆಗಿನ ಪರವಾಗಿ ಮೇಲ್ಮನವಿ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ವತ್ತುಗಳ ಖಾತೆಯನ್ನು ಪೌತಿ ಖಾತೆಯಡಿಯಲ್ಲಿ ಎಂ.ಆರ್. ಹೆಚ್-41/2023-24 ರಲ್ಲಿ ಹೊರಡಿಸಿದ ಆದೇಶವನ್ನು ರದ್ದುಪಡಿಸಲು ಕೋರಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು 2 ರಿಂದ 4ನೇ ಎದುರುದಾರರಾಗಿದ್ದು ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 29.12.2024 ರಂದು ಮಧ್ಯಾಹ್ನ 3-00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷಿಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ: 10.12.2024 ರಂದು ಕೊಡಲ್ಪಟ್ಟಿದೆ.

ಸಹಿ/- ಅಪೀಲುದಾರರ ಪರ ವಕೀಲರು (ಆರ್. ಗೋಪಾಲನಾಯ್ಕ)

ಸಹಿ/- ನ್ಯಾಯಾಲಯದ ಆದೇಶದ ಮೇರೆಗೆ, ಮಾನ್ಯ ಉಪ ವಿಭಾಗಾಧಿಕಾರಿಗಳು, ಹರಪನಹಳ್ಳಿ ವಿಭಾಗಾಧಿಕಾರಿಗಳು ಹಾಗೂ ಉಪ ವಿಭಾಗ,


## ಡಾ. ಶುಕ್ಲಾಶೆಟ್ಟಿ ಸಿಟಿ ಕ್ಲಿನಿಕ್ ಸ್ಥಳ ಬದಲಾವಣೆ

ಬಿನ್ನಿಕಂಪನಿ ರಸ್ತೆ, ಮಂಡಿಪೇಟೆಯಲ್ಲಿದ್ದ ಸಿಟಿ ಕ್ಲಿನಿಕನ್ನು

(ಡಾ.ಶುಕ್ಲಾ ಎಸ್.ಶೆಟ್ಟಿ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರು)

ದಿನಾಂಕ 12.12.2024ರ ಗುರುವಾರದಿಂದ 2ನೇ ಮುಖ್ಯ ರಸ್ತೆ,

(ಡಾ. ಎಸ್.ಎಂ. ಎಲಿಯವರ ಮನೆ ಮತ್ತು ಕ್ಲಿನಿಕ್ ರಸ್ತೆ)

ಎಂ.ಸಿ.ಸಿ. 'ಬಿ' ಬ್ಲಾಕ್‌ಗೆ ಸ್ಥಳಾಂತರಿಸಲಾಗಿದೆ.

ಸಂಪರ್ಕಿಸಿ. ಮೊ. 08192 296361

## ವಿವಾಹ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು



ಕನ್ನಡ ನಾಡು ಜನತಾ ಸಮಿತಿಯ ಅಧ್ಯಕ್ಷರಾದ

ಶ್ರೀ ದಸ್ತಗೀರ್ ಎಸ್. ಅಸಾದುಲ್ಲಾ

ದಂಪತಿಗೆ 20ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು.

ಕನ್ನಡ ನಾಡು ಜನತಾ ಸಮಿತಿಯ ಪದಾಧಿಕಾರಿಗಳು ಹಾಗೂ ಸ್ನೇಹಿತರ ಬಳಗ

# ವ್ಯಕ್ತಿತ್ವ ವಿಕಸನಕ್ಕೆ ಪಠ್ಯೇತರ ಚಟುವಟಿಕೆ ಅಗತ್ಯ



ದಾವಣಗೆರೆ, ಡಿ.11- ವಿದ್ಯಾರ್ಥಿಗಳು ಕಲಿಕೆಯ ಸಂದರ್ಭದಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ತಮ್ಮನ್ನು ಗುರುತಿಸಿ ಕೊಂಡರೆ ವ್ಯಕ್ತಿತ್ವ ವಿಕಸನಕ್ಕೆ ಸಹಾಯಕ ಎಂದು ಹಿರಿಯ ಕಲಾವಿದ ಆರ್.ಟಿ. ಅರುಣಕುಮಾರ್ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣ ದಲ್ಲಿ ನಿನ್ನೆ ನಡೆದ ಸ್ನಾತಕೋತ್ತರ ವಿದ್ಯಾರ್ಥಿ ಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪಠ್ಯೇತರ ಚಟುವಟಿಕೆಗಳು ಪಠ್ಯದ ಕಲಿಕೆಯಲ್ಲಿ ಆಸಕ್ತಿ ಮೂಡಿಸಿ ಉನ್ನತ ಸಾಧನೆ ಮಾಡಲು ನೆರವಾಗುತ್ತವೆ. ಅಲ್ಲದೆ ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಿದರೂ ಕ್ರಿಯಾಶೀಲ ಗುಣವನ್ನು ಬೆಳೆಸುತ್ತದೆ. ಕಲೆಯಲ್ಲಿನ ಆಸಕ್ತಿ ನೆಮ್ಮದಿ, ತೃಪ್ತಿ ನೀಡಿ, ಏಕಾಂಗಿತನವನ್ನು ಹೋಗಲಾಡಿಸುವುದು ಎಂದು ಹೇಳಿದರು.

ಕಲಿಯುವ ಪದವಿಯೊಂದೇ ಜೀವನದ ಗುರಿ ಸಾಧನೆಯಲ್ಲ. ಬದುಕಿನ ಪ್ರತಿಯೊಂದು ಕ್ಷಣವನ್ನು ಸಂಭ್ರಮಿಸುವುದು ಮುಖ್ಯವಾಗುತ್ತದೆ. ಅದಕ್ಕೆ ಕಲೆ ಮತ್ತು ಕಲಾಸಕ್ತಿಗಳು ನೆರವಾಗುತ್ತವೆ ಎಂದರು.

ವಿದ್ಯಾರ್ಥಿಗಳು ಕಲಿಯುವ ಸಂದರ್ಭದ ಲ್ಲಿಯೇ ಯಾವುದಾದರೂ ಪಠ್ಯೇತರ ಚಟುವಟಿಕೆ ಗಳಲ್ಲಿ ತೊಡಗಿಸಿಕೊಳ್ಳಬೇಕು. ಕ್ರೀಡೆ, ಕಲೆ, ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪಾಲ್ಗೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

**ದಾವಣಗೆರೆ ವಿವಿಯಲ್ಲಿ ಹಿರಿಯ ಕಲಾವಿದ ಆರ್.ಟಿ. ಅರುಣಕುಮಾರ್**

ನಾನು ಓದಿದ್ದು ಸಿವಿಲ್ ಎಂಜಿನಿಯರಿಂಗ್ ಪದವಿ. ಆದರೆ ಕಲಾಸಕ್ತಿ ನನ್ನನ್ನು ಸಿನಿಮಾ, ರಂಗ ಭೂಮಿ, ಮಿಮಿಕ್ರಿ ಕಲಾವಿದನನ್ನಾಗಿ ಮಾಡಿದೆ. ನಾನು ದೈಹಿಕವಾಗಿ ಕಾಯಿಲೆಯಿಂದ ಬಳಲುತ್ತಿದ್ದಾಗಲೂ ಆತ್ಮವಿಶ್ವಾಸ ತುಂಬಿದ್ದು ಕಲೆ. ಕಲೆಗೆ ಬಡವ-ಶ್ರೀಮಂತ, ಗಂಡು-ಹೆಣ್ಣು, ಪಂಡಿತ-ಪಾಮರ ಎಂಬಿತ್ಯಾದಿ ಯಾವುದೇ ಭೇದವಿಲ್ಲದೆ ಎಲ್ಲರನ್ನೂ ತೃಪ್ತಿಯಾಗಿಡುವ ಸಾಮರ್ಥ್ಯವಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಸಚಿವ ಪ್ರೊ.ಯು.ಎಸ್.ಮಹಾಬಲೇಶ್ವರ ಮಾತನಾಡಿ, ವಿದ್ಯಾರ್ಥಿ ಗಳಿಗೆ ಓದುವುದು ಎಷ್ಟು ಮುಖ್ಯವೋ ಬದುಕಿನ ಕೌಶಲ್ಯಗಳೂ ಅಷ್ಟೇ ಮುಖ್ಯ. ವ್ಯಕ್ತಿ ತನ್ನನ್ನು ತಾನು ಗುರುತಿಸಿಕೊಳ್ಳಲು ಮತ್ತು ಕ್ರಿಯಾಶೀಲವಾಗಿಡಲು ಪಠ್ಯೇತರ ಚಟುವಟಿಕೆಗಳು ಸಹಾಯಕವಾಗಿವೆ ಎಂದರು.

ವಿದ್ಯಾರ್ಥಿ ಕೂಟದ ಅಧ್ಯಕ್ಷ ಪ್ರೊ.ಎಸ್. ಶಿಶುಪಾಲ ಸ್ವಾಗತಿಸಿದರು. ವಿದ್ಯಾರ್ಥಿನಿ ಸೃಜನಾ ಸ್ವಾಗತ ಗೀತೆ ಹಾಡಿದರು. ಉಪಾಧ್ಯಕ್ಷೆ ಡಾ.ರೇಣುಕಾ ಕಾಪ್ಲೆ ವಂದಿಸಿದರು. ಉಪಾಧ್ಯಕ್ಷ ಡಾ.ಕೆ.ತಿಪ್ಪೇಶ್ ಕಾರ್ಯಕ್ರಮ ನಿರೂಪಿಸಿದರು.

## ಬಿಸಿಯೂಟ ತಯಾರಕರ ಗೌರವ ಧನ ತಾರತಮ್ಯ: ಕೇಂದ್ರದ ಗಮನ ಸೆಳೆದ ಪ್ರಭಾ



ದಾವಣಗೆರೆ, ಡಿ. 11 - ಪಿಎಂ ಪೋಷಣ್ ಅಡಿಯಲ್ಲಿ ಅಡುಗೆ ಸಹಾಯಕರಿಗೆ ಗೌರವ ಧನವನ್ನು ನೀಡುತ್ತಿದ್ದು ಇದರಲ್ಲಿ ಕೇಂದ್ರವು 60% ಹಾಗೂ ರಾಜ್ಯವು 40% ಗೌರವ ಧನ ಭರಿಸಬೇಕಾಗಿರುತ್ತದೆ. ಆರಂಭದಲ್ಲಿ ತಿಂಗಳಿಗೆ 1000 ರೂ. ಗೌರವ ಧನ ನೀಡುತ್ತಿದ್ದು. ಇದರಲ್ಲಿ ಕೇಂದ್ರವು ಸರ್ಕಾರದ 600 ರೂ. ಹಾಗೂ ರಾಜ್ಯ ಸರ್ಕಾರ 400 ರೂ. ಸೇರಿರುತ್ತದೆ.

ರಾಜ್ಯ ಸರ್ಕಾರವು ಹಂತ ಹಂತವಾಗಿ ಗೌರವ ಧನ ಹೆಚ್ಚಿಸಿದ್ದು ರಾಜ್ಯ ಸರ್ಕಾರದ ಪಾಲು ಪ್ರಸ್ತುತ 3000 ರೂ. ತಲುಪಿರುತ್ತದೆ. ಆದರೆ ಕೇಂದ್ರ ಸರ್ಕಾರವು ಯೋಜನೆ ಪ್ರಾರಂಭವಾದಗಿನಿಂದಲೂ ಅದೇ 600 ರೂ. ಕೊಡುತ್ತಿದ್ದು, ಯಾವುದೇ ಗೌರವ ಧನ ಹೆಚ್ಚಳ ಮಾಡಿರುವುದಿಲ್ಲ. ಈ ಬಗ್ಗೆ ಹಣದುಬ್ಬರ, ಆರ್ಥಿಕ ಪರಿಸ್ಥಿತಿ, ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಉದಾಹರಣೆಯೊಂದಿಗೆ ಪ್ರಸ್ತಾಪಿಸಿದ ಸಂಸದರು ಕೇಂದ್ರದ ಶಿಕ್ಷಣ ಇಲಾಖೆಗೆ ಬಿಸಿಯೂಟ ತಯಾರಕರ ಕೇಂದ್ರದ ಪಾಲಿನ ಗೌರವ ಧನ ಹೆಚ್ಚಿಸಿ ನೆಮ್ಮದಿಯ ಜೀವನ ನಡೆಸಲು ಸಹಕರಿಸುವಂತೆ ಮನವಿ ಮಾಡಿದರು.

## ನಾಳೆ ಶ್ರೀ ಗಡಿ ಚೌಡೇಶ್ವರಿ ದೇವಿ ಕಾರ್ತಿಕ

ದಾವಣಗೆರೆ, ಡಿ.11- ನಗರದ ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ (ಚಿಗಟೇರಿ ಬಡಾವಣೆ), ಕುಂದುವಾಡ ರಸ್ತೆಯ ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನದಲ್ಲಿ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 13 ರಂದು ನಡೆಯಲಿದೆ.

## 15 ರಂದು ಡಾ.ಎಂ.ಜಿ. ಈಶ್ವರಪ್ಪ, ಪ್ರಭಾ ಅತ್ರೆ ಸ್ಮರಣಾರ್ಥ 'ಸ್ವರಾಂಜಲಿ'

ದಾವಣಗೆರೆ, ಡಿ. 11- ಪ್ರತಿಮಾ ಸಭಾ ಮತ್ತು ಸ್ವರಮಯಿ (ಪುಣೆ) ಇವರ ವತಿಯಿಂದ ಸಾಂಸ್ಕೃತಿಕ ಚೇತನ, ಜಾನಪದ ತಜ್ಞ ಡಾ. ಎಂ. ಜಿ. ಈಶ್ವರಪ್ಪ ಹಾಗೂ ಸ್ವರ ಯೋಗಿನಿ ಡಾ. ಪ್ರಭಾ ಅತ್ರೆ ಸ್ಮರಣಾರ್ಥ ಇದೇ ದಿನಾಂಕ 15 ರಂದು ಸಂಜೆ 5.30 ಕ್ಕೆ ನಗರದ ಬಾಪೂಜಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿನ ಎಸ್.ಎಸ್.ಎಂ.ಸಭಾಂಗಣದಲ್ಲಿ 'ಸ್ವರಾಂಜಲಿ' ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಮಾ ಸಭಾದ ಅಧ್ಯಕ್ಷ ಬಾ.ಮ.ಬಸವರಾಜಯ್ಯ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಖ್ಯಾತ ಹಿಂದೂಸ್ಥಾನಿ ಗಾಯಕ ಪಂಡಿತ್ ವೆಂಕಟೇಶ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಪ್ರತಿಮಾ ಸಭಾ ಗೌರವಾಧ್ಯಕ್ಷ ಪ್ರೊ.ಎಸ್. ಹಾಲಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಪಂಡಿತ್ ವೆಂಕಟೇಶ್ ಕುಮಾರ್, ರಾಜಸ್ಥಾನ ಸಂಗೀತ ನಾಟಕ ಅಕಾಡೆಮಿ ಪುರಸ್ಕೃತರೂ, ಡಾ.ಪ್ರಭಾ ಅತ್ರೆ ಅವರ ಶಿಷ್ಯ ಡಾ. ಚೇತನಾ ಪಾಠಕ್, ದಿ.ಡಾ.ಎಂ.ಜಿ. ಈಶ್ವರಪ್ಪ ಪ್ರೊ.ಬಸಮ್ಮ ಅವರ ಪುತ್ರ ಪೃಥುವೈನ್ಯ 'ಸ್ವರಾಂಜಲಿ' ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಕೇಶವ ಜೋಷಿ, ಸಂತೋಷ್ ಹೂಗಾರ, ಗುರುಪ್ರಸಾದ್ ಹೆಗಡೆ, ಶ್ರೀಶೈಲ ಬಿರಾದಾರ ಅವರುಗಳು ಪಕ್ಕವಾದ್ಯದೊಂದಿಗೆ ಸಾಥ್ ನೀಡಲಿದ್ದಾರೆಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರತಿಮಾ ಸಭಾದ ಪ್ರಧಾನ ಕಾರ್ಯದರ್ಶಿ ಬಿ.ಎನ್.ಮಲ್ಲೇಶ್, ಕೋಶಾಧ್ಯಕ್ಷ ಸಂಪನ್ನ ಮುತಾಲಿಕ್, ಸಹ ಕಾರ್ಯದರ್ಶಿ ಎಸ್.ಎಸ್. ಸಿದ್ಧರಾಜ್, ನಾಗರಾಜ್ ಸಿರಿಗೆರೆ ಉಪಸ್ಥಿತರಿದ್ದರು.

### ನಗರದಲ್ಲಿ ಇಂದು ಸಭೆ

ವಿವಿಧ ನಿಗಮಗಳ ಫಲಾನುಭವಿಗಳ ಆಯ್ಕೆಗೆ ಇಂದು ಬೆಳಿಗ್ಗೆ 10ಕ್ಕೆ ಜಿ.ಪಂ. ನಲ್ಲಿ ಆಯ್ಕೆ ಸಮಿತಿ ಸಭೆ ನಡೆಯಲಿದೆ.




# ಹೈಸ್ಕೂಲ್ ಮೈದಾನದಲ್ಲಿನ ಅನುಪಯುಕ್ತ ಕಟ್ಟಡ ತೆರವಿಗೆ ಹೋರಾಟ ಸಮಿತಿ ಆಗ್ರಹ



ದಾವಣಗೆರೆ, ಡಿ.11- ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿರುವ ತಾತ್ಕಾಲಿಕ ಬಸ್ ನಿಲ್ದಾಣದ ಅನುಪಯುಕ್ತ ಕಟ್ಟಡವನ್ನು ತೆರವುಗೊಳಿಸಿ ಕ್ರೀಡಾಪಟುಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವಂತೆ ಆಗ್ರಹಿಸಿ ದಾವಣಗೆರೆ ಹೈಸ್ಕೂಲ್ ಮೈದಾನ ಉಳಿಸಿ ಹೋರಾಟ ಸಮಿತಿಯು ಸಹಾಯಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ.

ಕೆಲವು ದಿನಗಳ ಹಿಂದೆಯೇ ಹೈಸ್ಕೂಲ್ ಮೈದಾನ ದಲ್ಲಿ ನಿರ್ಮಾಣವಾಗಿದ್ದ ತಾತ್ಕಾಲಿಕ ಖಾಸಗಿ ಹಾಗೂ ಸರ್ಕಾರಿ ಬಸ್ ನಿಲ್ದಾಣ ಮೂಲ ಜಾಗಕ್ಕೆ ಸ್ಥಳಾಂತರ ಗೊಂಡಿದ್ದರೂ ಮೈದಾನದ ಜಾಗ ಸಾರ್ವಜನಿಕ ಹಾಗೂ ಕ್ರೀಡಾಪಟುಗಳ ಬಳಕೆಗೆ ಮುಕ್ತವಾಗಿ ತಲುಪುತ್ತಿಲ್ಲ.

ಮೈದಾನದ ಮೂಲ ಉದ್ದೇಶ ಹೊರತು ಪಡಿಸಿ ವರ್ಷವಿಡೀ ಇನ್ನಿತರೆ ಕಾರ್ಯಗಳಿಗೆ ಬಳಕೆ ಆಗುತ್ತಿರುವುದರಿಂದ ಮೈದಾನದಲ್ಲಿ ಗುಂಡಿಗಳು ಉಲ್ಬಣವಾಗಿವೆ. ವಾಣಿಜ್ಯ ಉಪಯೋಗಕ್ಕಾಗಿ ಬಳಸುವಾಗ ಹಾಕಿದ ಟೆಂಟಿನ ತಗ್ಗುಗಳು ಮೈದಾನದ ಸ್ವರೂಪ ಬದಲಿಸಿವೆ.

ಕೂಡಲೇ ಈ ದುಸ್ಥಿತಿ ಸರಿಪಡಿಸಿ ಕ್ರೀಡಾಪಟುಗಳಿಗೆ ಸಹಾಯಕವಾಗುವ ನಿಟ್ಟಿನಲ್ಲಿ ಮೈದಾನದಲ್ಲಿನ ತಗ್ಗು-ದಿನ್ನೆಗಳನ್ನು ಸಮತಟ್ಟಾಗಿಸಿ, ಸುಸಜ್ಜಿತಗೊಳಿಸಬೇಕು ಮತ್ತು ಶುದ್ಧ ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಒದಗಿಸಬೇಕೆಂದು ಸಮಿತಿಯು ಒತ್ತಾಯಿಸಿದೆ.

ಮೈದಾನದಲ್ಲಿ ವಾಣಿಜ್ಯ ಬಳಕೆಗೆ ಅವಕಾಶ ನೀಡಬಾರದು. ವಿವಿಧ ಸರ್ಕಾರಿ ಕ್ರೀಡಾಕೂಟಗಳನ್ನು ಏರ್ಪಡಿಸುವ ಮೂಲಕ ಯುವಕರಲ್ಲಿ ಕ್ರೀಡಾ ಮನೋಭಾವ ಬೆಳೆಸುವಂತೆ ಕ್ರಮ ಕೈಗೊಳ್ಳಬೇಕೆಂದು ಹೋರಾಟ ಸಮಿತಿ ಆಗ್ರಹಿಸಿದೆ.

ಈ ವೇಳೆ ಹೋರಾಟ ಸಮಿತಿಯ ಪಿ. ಪರಶುರಾಮ್, ಕಾಂತರಾಜ್, ಅಬ್ದುಲ್ ಖಾದರ್, ಸೈಯದ್ ಖಾಸಿಂ, ಕುತ್ಬುದ್ದೀನ್, ಅಲ್ತಾಫ್, ಅಮ್ಜದ್ ಖಾನ್, ಮೊಹಮ್ಮದ್ ಇಮ್ತಿಯಾಜ್, ವೆಂಕಟೇಶ್ ಇತರರು ಇದ್ದರು.

## ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷರಾಗಿ ಹಾಲೇಶ್

**ಆಲೂರು ನಿಂಗರಾಜ್ ನೇತೃತ್ವದಲ್ಲಿ ಆಯ್ಕೆ**

ದಾವಣಗೆರೆ, ಡಿ.11- ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಸಮಿತಿಯನ್ನು ಸಂಘದ ರಾಜ್ಯ ಉಪಾಧ್ಯಕ್ಷ ಆಲೂರು ನಿಂಗರಾಜ್ ನೇತೃತ್ವದಲ್ಲಿ ಇಂದು ಆಯ್ಕೆ ಮಾಡಲಾಯಿತು.

ಗೌರವಾಧ್ಯಕ್ಷರಾಗಿ ಗಾಂಧಿನಗರದ ಎಂ. ಹಾಲೇಶ್, ಅಧ್ಯಕ್ಷರಾಗಿ ರಾಜು ಶಾಮನೂರು ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರುಗಳಾಗಿ ಜಯಪ್ರಕಾಶ್ ಬಾಬು, ಅಂಜಿನಪ್ಪ ಶಾಮನೂರು, ಲಕ್ಷ್ಮಣ ಕೊಡಗನೂರು, ಸಾವಜ್ಜರ ಮಂಜುನಾಥ ಕುಂದವಾಡ, ಪೂಜಾರ್ ಸಿದ್ದಪ್ಪ ತುಪ್ಪದಹಳ್ಳಿ, ಹುಚ್ಚಂಗಿ ಪ್ರಸಾದ್ ಸಂತೇಬೆನ್ನೂರು, ಶಾಂತರಾಜ್ ಕುಂದೂರು.

ಪ್ರಧಾನ ಕಾರ್ಯದರ್ಶಿಯಾಗಿ ಬಸವರಾಜ್ ಡಿ. ಆಲೂರು, ಸಂಘಟನಾ ಕಾರ್ಯದರ್ಶಿಯಾಗಿ ಹಾಲೇಶ್ ಬಿ., ಕೆ.ಹೆಚ್. ಅವಿನಾಶ್, ಕಾರ್ಯದರ್ಶಿಯಾಗಿ ಆನಂದ ಎಂ. ಜಾಲಿಹಾಳ್, ಹರೀಶ್ ಹೊನ್ನೂರು (ಎಸ್.ಜೆ.ಎಂ. ನಗರ), ಖಜಾಂಚಿಯಾಗಿ ದುರುಗೇಶ್ ಎಂ. (ನಿಟುವಳ್ಳಿ), ಸದಸ್ಯರುಗಳಾಗಿ ಆವರಗೆರೆ ಚಂದ್ರಪ್ಪ, ಬಾತಿ ಸತೀಶ್, ಬೇತೂರು ಹನುಮಂತಪ್ಪ, ಕೋಲ್ಕುಂಟೆ ಚಂದ್ರಪ್ಪ, ಸಿದ್ದಪ್ಪ ಕೊಗ್ಗನೂರು, ಮಹೇಶ್ ಬಾಡ, ಅತ್ತಿಗೆರೆ ಸಿದ್ದಪ್ಪ ಆಯ್ಕೆಯಾಗಿದ್ದಾರೆ.




## ಡ್ರ್ಯಾಗನ್ ವಾರಿಯರ್ಸ್ ಮಾರ್ಷಲ್ ಪ್ರಥಮ



**ರಾಜ್ಯ ಮಟ್ಟದ ಕರಾಟೆ ಸ್ಪರ್ಧೆ**

ದಾವಣಗೆರೆ, ಡಿ. 11- ನಗರದಲ್ಲಿ ಈಚೆಗೆ ಕರ್ನಾಟಕ ಒಕಿನವ ರಿಯೊ ಶೋರಿನ ಸಂಸ್ಥೆ ಆಯೋಜಿಸಿದ್ದ ರಾಜ್ಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಇಲ್ಲಿನ ವಿದ್ಯಾನಗರದ ಡ್ರ್ಯಾಗನ್ ವಾರಿಯರ್ಸ್ ಮಾರ್ಷಲ್ ಕರಾಟೆ ವಿದ್ಯಾರ್ಥಿಗಳಾದ ಗಗನ್ ರಾಜ್, ವಿಸ್ಮಯ ಹಾಗೂ ಸುಕೃತಾ ಅವರುಗಳು ಆಯಾ ವಯೋ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ.

ಇಂದು ಬೆಳಗ್ಗೆ ವಿದ್ಯಾನಗರ ವಾಯುವಿಹಾರ ಬಳಗದಿಂದ ಬಹುಮಾನಿತ ಮಕ್ಕಳನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತರು, ಲೇಖಕರೂ ಆದ ಬಾ.ಮ. ಬಸವರಾಜಯ್ಯ, ನಿವೃತ್ತ ವಾರ್ತಾಧಿಕಾರಿ ಕರಿಯಪ್ಪ, ತರಬೇತುದಾರ ಸಾದಿಕ್ ಬಾಷಾ ಸೇರಿದಂತೆ ಬಹುಮಾನಿತ ಮಕ್ಕಳ ಪೋಷಕರು ಉಪಸ್ಥಿತರಿದ್ದರು.







KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas